بِسْمِ اللهِ الرَّحْمٰنِ الرَّحِيْمِ    نَحْمَدُهٗ وَنُصَلِّی عَلٰی رَسُوْلِہِ الْکَرِیْمِ    وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 05

ಕನ್ನಡ ಬದರ್ ವಾರ ಪತ್ರಿಕೆ
WEEKLY BADAR QADIAN KANNADA

ಸಂಚಿಕೆ: 36

ವಾರ್ಷಿಕ ಶುಲ್ಕ ರೂ.600/–

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

05 ಸೆಪ್ಟೆಂಬರ್ 2024, 05 ತಬೂಕ್ 1403 ಹಿಜರಿ ಶಮ್‌ಸಿ,
01 ರಬೀಉಲ್ ಅವ್ವಲ್ 1445 ಹಿಜರಿ ಖಮರಿ.

## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– **ಆಮೀನ್**

اَللّٰهُمَّ اَيِّدْ اِمَامَنَا بِرُوْحِ الْقُدُسِ
وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

وَأُدْخِلَ الَّذِينَ آمَنُوا وَعَمِلُوا الصَّالِحَاتِ
جَنَّاتٍ تَجْرِي مِن تَحْتِهَا الْأَنْهَارُ خَالِدِينَ
فِيهَا بِإِذْنِ رَبِّهِمْ ۖ تَحِيَّتُهُمْ فِيهَا سَلَامٌ ○

**(ಸೂರಃ ಇಬ್ರಾಹೀಂ : 24)**

**ಅಂದರೆ: ಯಾರು ವಿಶ್ವಾಸ ಹೊಂದಿ ಸತ್ಕರ್ಮಗಳನ್ನು ಮಾಡುತ್ತಾರೋ ಅವರು ಕೆಳಬದಿಯಲ್ಲಿ ಹೊಳೆಗಳು ಹರಿಯುವ ಸ್ವರ್ಗೀಯ ತೋಟಗಳಲ್ಲಿ ಪ್ರವೇಶಿಸಲ್ಪಡುವರು. ಅವರು ತಮ್ಮ ಪ್ರಭುವಿನ ಅನುಮತಿ ಪ್ರಕಾರ ಅಲ್ಲಿ ಶಾಶ್ವತವಾಗಿ ನೆಲೆಸುವರು. ಅಲ್ಲಿ ಅವರ ಶುಭಾಶಂಸೆ 'ಸಲಾಂ' (ಶಾಂತಿ) ಎಂದಾಗಿರುವುದು.**

## ಪ್ರವಾದಿ ಮುಹಮ್ಮದ್(ಸ) ರವರ ಉಪದೇಶ

### ನಿಶ್ಶಬ್ಧವಾಗಿ ಹಾಗೂ ಗಮನವಿಟ್ಟು ಖುತ್‌ಬ ಆಲಿಸಬೇಕೆಂಬ ಉಪದೇಶ

* ಹಝ್‌ರತ್ ಅಬು ಹುರೈರ(ರ) ವರದಿ ಮಾಡುತ್ತಾರೆ. ರಸೂಲುಲ್ಲಾಹ್(ಸ) ನುಡಿದರು: ಜುಮುಅ ಸಮಯದಲ್ಲಿ ಇಮಾಮರು ಖುತುಬ ನೀಡುತ್ತಿರುವಾಗ ನೀವು ನಿಮ್ಮ ಸಂಗಡಿಗರಿಗೆ ಸುಮ್ಮನಿರು ಎಂದು ಹೇಳುವುದು ಸಹ ನಿಮ್ಮ ತಪ್ಪಾಗಿರುತ್ತದೆ. (ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಜುಮುಅ)

* ಹಝ್‌ರತ್ ಇಬ್ನು ಅಬ್ಬಾಸ್(ರ) ರಿಂದ ವರದಿ ಇದೆ. ನಾನು ರಸೂಲುಲ್ಲಾಹ್(ಸ), ಹಝ್‌ರತ್ ಅಬೂಬಕರ್, ಹಝ್‌ರತ್ ಉಮರ್ ಮತ್ತು ಹಝ್‌ರತ್ ಉಸ್ಮಾನ್(ರ) ರೊಡನೆ ಕೂಡಿ ಈದ್ ನಮಾಝುಗಳನ್ನು ನಿರ್ವಹಿಸಿರುತ್ತೇನೆ. ಇವು ಖುತುಬಕ್ಕಿಂತ ಮುಂಚೆ ನಿರ್ವಹಿಸಿಕೊಡುತ್ತಿದ್ದರು.

* ಹಝ್‌ರತ್ ಇಬ್ನು ಅಬ್ಬಾಸ್ ವರದಿ ಮಾಡುತ್ತಾರೆ. ನಬಿ(ಸ) ಈದುಲ್–ಫಿತರ್ ದಿವಸ ಎರಡು ರಕಅತ್ ನಿರ್ವಹಿಸಿದರು. ಅವರು ಅದಕ್ಕಿಂತ ಮುಂಚೆಯಾಗಲಿ ನಂತರವಾಗಲಿ ಯಾವ ನಫಲ್ ನಮಾಝ್ ನಿರ್ವಹಿಸಲಿಲ್ಲ. ಮತ್ತೆ ಅವರು ಮಹಿಳೆಯರ ಕಡೆ ಬಂದರು. ಆಗ ಹಝ್‌ರತ್ ಬಿಲಾಲ್‌ರವರು ಅವರ ಜೊತೆಗಿದ್ದರು. ಅವರು ಮಹಿಳೆಯರಿಗೆ ಸದಖಾ (ದಾನ) ಮಾಡಲು ಆಜ್ಞಾಪಿಸಿದರು. ಆಗ ಅವರುಗಳು ದಾನ ಮಾಡತೊಡಗಿದರು. ಒಬ್ಬಳು ತನ್ನ ಬಾವಲಿ ಕೊಡುತ್ತಿದ್ದರೆ, ಇನ್ನೊಬ್ಬರು ತನ್ನ ಕೊರಳಿನ ಮಾಲೆಯನ್ನು ಕೊಡುತ್ತಿದ್ದರು.

(ಸಹೀಹ್ ಬುಖಾರಿ, ಸಂಪುಟ–2, ಕಿತಾಬುಲ್ ಈದೈನ್, ಮುದ್ರಣ ಖಾದಿಯಾನ್ 2006)

**'ಬದರ್' ವಾರಪತ್ರಿಕೆಯನ್ನು Online ಮುಖಾಂತರ ಓದಲು ಸಂಪರ್ಕಿಸಿ ನಮ್ಮ ವೆಬ್‌ಸೈಟ್:**
**https://akhbarbadr.in/Kannada/#gsc.tab=0**

## ಅಲ್ಲಾಹನ ಅಭಯವನ್ನು ಪಡೆಯಿರಿ, ನಮಾಝುಗಳನ್ನು ಕ್ರಮಬದ್ಧವಾಗಿ ನಿರ್ವಹಿಸಿರಿ, ನಮಾಝುಗಳು ಕ್ಷಮಿಸಲ್ಪಡುವುದಿಲ್ಲ, ಪ್ರವಾದಿಗಳ ನಮಾಝ್ ಸಹ ಕ್ಷಮಿಸಲ್ಪಟ್ಟಿಲ್ಲ.

**ಸಯ್ಯದುನಾ ಹಝ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ಊಲುಲ್ ಅಮರ್‌ರ (ಅಧಿಕಾರಿಗಳ) ಅನುಸರಣೆ

ಪವಿತ್ರ ಖುರ್‌ಆನ್‌ನಲ್ಲಿ ಆಜ್ಞಾಪಿಸಲಾಗಿದೆ. **ಅತೀಉಲ್ಲಾಹ ವ ಅತೀಉರ್‍ರಸೂಲ ವ ಊಲಿಲ್‌ಅಮ್ರಿ ಮಿನ್ಕುಮ್** (ಅನ್ನಿಸಾಅ–60) ನಿಮ್ಮ ಅಧಿಕಾರಿಗಳಿಗೂ ವಿಧೇಯರಾಗಿರಿ. ಎಂಬ ಸ್ಪಷ್ಟವಾದ ಆಜ್ಞೆಯಿದೆ. ಯಾರಾದರೂ ಸರ್ಕಾರಗಳ ಪಾಲನೆ "ಮಿನ್‌ಕುಮ್" ಎಂಬುವುದರಲ್ಲಿಲ್ಲ ಎಂದು ತಿಳಿದುಕೊಂಡರೆ ಅದು ಶುದ್ಧ ತಪ್ಪಾಗುತ್ತದೆ. ಸರ್ಕಾರ ಯಾವ ಮಾತುಗಳನ್ನು ಶರಿಅತ್‌ಗೆ (ಧರ್ಮ ಸಂಹಿತೆ) ಅನುಗುಣವಾಗಿ ವಿಧಿಸುತ್ತದೆಯೋ ಅದು "ಮಿನ್‌ಕುಮ್" ನಲ್ಲಿ ಒಳಗೊಂಡು ಯಾರು ನಮ್ಮನ್ನು ವಿರೋಧಿಸುವುದಿಲ್ಲ. ಅವರು ನಮ್ಮಲ್ಲಿ ಸೇರಿದವರಾಗಿದ್ದಾರೆ. ಪವಿತ್ರ ಖುರ್‌ಆನ್‌ನಿಂದ ಸಾಬೀತಾಗುವುದೇನೆಂದರೆ ಸರ್ಕಾರದ ಆದೇಶಗಳನ್ನು ಪಾಲಿಸಬೇಕು. ಅದರ ಆಜ್ಞೆಗಳನ್ನು ಮನ್ನಿಸಬೇಕಾಗುವುದು.

### ಶುಭಕರ ಹಾದಿಗಳನ್ನು ಅಪ್ಪಿಕೊಳ್ಳಿರಿ.

ಪುಣ್ಯಕಾರ್ಯ ಮತ್ತು ದೇವಭಕ್ತಿಯ ಕಡೆ ಗಮನ ವಹಿಸಿರಿ ಮತ್ತು ಶುಭಕರ ಹಾದಿಗಳನ್ನು ಅಪ್ಪಿಕೊಳ್ಳಿರಿ. ಆಗ ಮಾತ್ರ ಏನನ್ನಾದರೂ ಸಾಧಿಸಬಹುದು. **ಇನ್ನಲ್ಲಾಹ ಲಾ ಯುಗೈಯಿರು ಬಿಖೌಮಿನ್ ಹತ್ತಾ ಯುಗೈಯಿರು ಮಾ ಬಿ ಅನ್‌ಫುಸಿಹಿಮ್** (ಅರ್‍ರಅದ್–12) ಒಂದು ಸಮುದಾಯದವರು ತಮ್ಮ ಹೃದಯದಲ್ಲಿರುವುದಕ್ಕೆ ಸ್ವಯಂ ಮಾರ್ಪಾಟು ಮಾಡುವ ತನಕ ಅವರ ಸ್ಥಿತಿಗೆ ಅಲ್ಲಾಹನು ಮಾರ್ಪಾಟು ಮಾಡಲಾರನು. ಅವಶ್ಯವಾಗಿರುವುದೇನೆಂದರೆ ಜನರು ಅಲ್ಲಾಹನೆಡೆ ಮರಳಬೇಕು. ನಮಾಝ್ ನಿರ್ವಹಿಸಬೇಕು. ಝುಕಾತ್ (ದಾನ) ನೀಡಬೇಕು. ಯಾರ ಹಕ್ಕುಗಳನ್ನು ದಮನಿಸಬಾರದು ಮತ್ತು ದುಷ್ಕರ್ಮಗಳಿಂದ ದೂರವಿರಬೇಕು. ಈ ಮಾತು ನಿಚ್ಚಳಗೊಂಡಿದೆ. ಕೆಲ ಸಂದರ್ಭಗಳಲ್ಲಿ ಒಬ್ಬನು ದುಷ್ಕರ್ಮಗೈದರೆ ಅದು ಇಡೀ ನಗರ ಮತ್ತು ಮನೆಗಳ ನಾಶಕ್ಕೆ ಕಾರಣವಾಗುತ್ತದೆ. ಆದುದರಿಂದ ದುಷ್ಕರ್ಮಿಗಳನ್ನು ತ್ಯಜಿಸಿರಿ. ಅದು ನಾಶಕ್ಕೆ ಕಾರಣವಾಗುವುದು. ನಮಾಝುಗಳನ್ನು ಕ್ರಮಬದ್ಧವಾಗಿ ಪ್ರಾಮಾಣಿಕತೆಯಿಂದ ನಿರ್ವಹಿಸಿರಿ. ಅಲ್ಲಾಹನ ಅಭಯವನ್ನು ಪಡೆಯಿರಿ.

### ನಮಾಝುಗಳನ್ನು ಕ್ರಮಬದ್ಧವಾಗಿ ಪ್ರಾಮಾಣಿಕತೆಯಿಂದ ನಿರ್ವಹಿಸಿರಿ.

ನಮಾಝುಗಳು ಕ್ಷಮಿಸಲ್ಪಡುವುದಿಲ್ಲ. ಪ್ರವಾದಿಗಳ ನಮಾಝು ಸಹ ಕ್ಷಮಿಸಲ್ಪಟ್ಟಿಲ್ಲ. ಒಂದು ಹದೀಸಿನಲ್ಲಿ ಬರುತ್ತದೆ. ರಸೂಲುಲ್ಲಾಹ್(ಸ) ರವರ ಬಳಿ ಒಂದು ಹೊಸ ವರ್ಗದವರು ಬಂದರು. ಅವರು ನಮಾಝುಗಳಿಂದ ಕ್ಷಮೆ (ವಿನಾಯಿತಿ) ಕೋರಿದರು ಅವರು ನುಡಿದರು ಯಾವ ಧರ್ಮದಲ್ಲಿ ಶಿಸ್ತು ನಿಯಮವಿಲ್ಲವೋ ಅದು ಧರ್ಮವೇ ಅಲ್ಲ.

**(ಮಲ್ಫೂಝಾತ್, ಸಂಪುಟ 1, ಪುಟ–238–240, ಮುದ್ರಣ ಖಾದಿಯನ್ 2018)**

## ಖಾದಿಯಾನ್ ದಾರುಲ್ ಅಮಾನ್‌ನಲ್ಲಿ ಸಾಲಾನ ಇಜ್ತೆಮಾ 2024 ನಡೆಯುವ ದಿನಾಂಕಗಳು

ಸಯ್ಯದನಾ ಹಝ್‌ರತ್ ಅಮೀರುಲ್ ಮೂಮಿನೀನ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು ಭಾರತದಲ್ಲಿ ಅಂಗ ಸಂಸ್ಥೆಗಳ (ಮಜ್ಲಿಸ್ ಅನ್ಸರುಲ್ಲಾ, ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ, ಲಜ್ನಾ ಇಮಾಇಲ್ಲಾ) ರಾಷ್ಟ್ರೀಯ ವಾರ್ಷಿಕ ಕೂಟಗಳನ್ನು (ಇಜ್ತೆಮಾ) 25, 26 ಮತ್ತು 27ನೇ ಅಕ್ಟೋಬರ್ 2024 ರಂದು (ಶುಕ್ರವಾರ, ಶನಿವಾರ, ಭಾನುವಾರ) ಆಯೋಜಿಸಲು ಅನುಮತಿ ನೀಡಿದ್ದಾರೆ.

ಎಲ್ಲಾ ಉಪ ಸಂಸ್ಥೆಗಳ ಸದಸ್ಯರು ಖಾದಿಯಾನಿನಲ್ಲಿ ಈ ಆಧ್ಯಾತ್ಮಿಕ ಪರಿಸರದಲ್ಲಿ ಆಯೋಜಿಸಲಾಗುವಂತಹ ಇಜ್ತೆಮಾಗಳಲ್ಲಿ ಪಾಲ್ಗೊಳ್ಳಲು ಇಂದಿನಿಂದಲೆ ತಯಾರಿ ಪ್ರಾರಂಭಿಸಿರಿ. ಈ ಇಜ್ತೆಮಾಗಳು ತರಬೇತಿಯ ಮುಖ್ಯ ಮೂಲವಾಗಿದೆ.

**(ಸದರ್ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಭಾರತ)**

**ಸೂಚನೆ** ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಅವರು ಪ್ರತಿ ಶುಕ್ರವಾರ ಯು.ಕೆ.ಯ ಇಸ್ಲಾಮಾಬಾದ್‌ನ 'ಮಸ್ಜಿದ್ ಮುಬಾರಕ್' ನಿಂದ ಖುತ್‌ಬ ಜುಮುಅವನ್ನು ನೀಡುತ್ತಾರೆ. ಅದರ ನೇರ ಪ್ರಸಾರ MTA ಮುಖಾಂತರ ವೀಕ್ಷಿಸಲು ವಿನಂತಿಸಿಕೊಳ್ಳುತ್ತೇವೆ.

# ಖುತ್‌ಬ ಜುಮುಅ

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿರುವರು. ಸಲಾಮನ್ನು ಹರಡಿರಿ. ಅದಕ್ಕಾಗಿ ಪರಿಚಿತರಿಗೂ ಅಪರಿಚಿತರಿಗೂ ನೀವು ಸಲಾಂ ಹೇಳಿರಿ.

ಈ ದಿನಗಳಲ್ಲಿ ಇಲ್ಲಿ ಹದೀಖತುಲ್ ಮಹ್‌ದಿಯಲ್ಲಿ ಒಂದು ತಾತ್ಕಾಲಿಕ ಪಟ್ಟಣವನ್ನು ನಿರ್ಮಿಸಲಾಗಿದೆ. ಈ ವಾತಾವರಣದಲ್ಲಿ ಇದ್ದುಕೊಂಡು ನಾವು ಲೌಕಿಕ ಕೋಲಾಹಲಗಳಿಂದ ಬೇರ್ಪಟ್ಟು ತಮ್ಮ ತಮ್ಮ ಆಧ್ಯಾತ್ಮಿಕ, ನೈತಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ಹೀಗೆ ಮಾಡಲಾಗಿದೆ.

ಇಂತಹ ಸ್ಥಿತಿಗಳಲ್ಲಿ ಅತಿಥಿಗಳಿಗೆ ಯಾವುದಾದರೂ ಸೌಕಾರ್ಯ ಲಭಿಸುವುದರ ಬಗ್ಗೆ ಇರುವ ಚಿಂತೆಗಿಂತ ಯಾವ ರೀತಿಯಲ್ಲಿ ನಾವು ಈ ವಾತಾವರಣದಿಂದ ಹೆಚ್ಚು ಹೆಚ್ಚು ಪ್ರಯೋಜನ ಪಡೆಯುವುದು ಎಂಬ ಚಿಂತೆ ಇರಬೇಕು.

ಎಲ್ಲ ಕಾರ್ಯಕರ್ತರೊಡನೆ ಹೇಳಲು ಬಯಸುವುದೇನೆಂದರೆ: ತಮ್ಮ ಡ್ಯೂಟಿಗಳನ್ನು ಉತ್ತಮ ರೀತಿಯಲ್ಲಿ ಈಡೇರಿಸಲು ಪ್ರಯತ್ನಿಸಿರಿ. ಜಲ್ಸದ ಅತಿಥಿಗಳನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳೆಂದು ತಿಳಿದುಕೊಂಡು ಸೇವೆ ಮಾಡಿರಿ. ಅತಿಥಿಗಳಿಂದ ಯಾವುದಾದರೂ ತಪ್ಪು ಸಂಭವಿಸಿದೆ ಎಂದು ನಿಮಗೆ ಅನಿಸಿದರೂ ಕೂಡ ಅದನ್ನು ಕಡೆಗಣಿಸಿರಿ. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ದೇಶದಲ್ಲಿ ಅತಿಥಿ ಸತ್ಕಾರ ಮತ್ತು ಉನ್ನತ ನೈತಿಕತೆ ಅಹ್ಮದಿಯಾ ಜಮಾಅತಿನ ವಿಶಿಷ್ಟ ಗುಣವಾಗಿ ಬಿಟ್ಟಿದೆ.

ಅಲ್ಲಾಹನಿಗಾಗಿ ಯಾತ್ರೆ ಮಾಡುವವರಿಗೆ ಲೌಕಿಕವಾದ ಸೌಕರ್ಯಗಳ ಕಡೆಗೆ ಬಹಳ ಕಡಿಮೆ ಗಮನವಿರುತ್ತದೆ. ಕೆಲವೊಮ್ಮೆ ವ್ಯವಸ್ಥೆಗಳಲ್ಲಿ ಕೊರತೆಗಳು ಕಂಡುಬರುತ್ತವೆ. ಆದರೆ ಅವುಗಳನ್ನು ಕಡೆಗಣಿಸಬೇಕು. ನಮ್ಮ ಉದ್ದೇಶ ಆಧ್ಯಾತ್ಮಿಕ ಭೋಜನವನ್ನು ಗಳಿಸುವುದಾಗಿದೆ ಎಂಬ ಯೋಚನೆ ಬರುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನ ಹೃದಯದಲ್ಲಿ ಇರುವುದಾದರೆ ಆತಿಥೇಯ ಮತ್ತು ಅತಿಥಿ ಇಬ್ಬರು ಕೂಡ ಪ್ರೀತಿ ಮತ್ತು ಸ್ನೇಹದಿಂದ ಈ ದಿನಗಳನ್ನು ಕಳೆಯಬಹುದಾಗಿದೆ.

ಯಥಾರ್ಥ ಸತ್ಯವಿಶ್ವಾಸಿಯ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ನುಡಿದಿರುವುದೇನೆಂದರೆ ಆತನು ಕೋಪವನ್ನು ನಿಯಂತ್ರಿಸುವವನಾಗಿರುತ್ತಾನೆ. ಆದ್ದರಿಂದ ಜಲ್ಸದ ವಾತಾವರಣದ ಪರಿಶುದ್ಧತೆಯನ್ನು ಮುಂದಿರಿಸಿರಿ ಮತ್ತು ಪರಸ್ಪರರ ತಪ್ಪುಗಳನ್ನು ಕಡೆಗಣಿಸಿರಿ. ಕ್ಷಮೆ ಮತ್ತು ಕರುಣೆಯಿಂದ ವರ್ತಿಸಿರಿ.

**ಜಲ್ಸ ಸಾಲಾನ ಬ್ರಿಟನ್ ಸಂದರ್ಭದಲ್ಲಿ ಅತಿಥೇಯರು ಹಗೂ ಅತಿಥಿಯರನ್ನು ಉದ್ದೇಶಿಸಿ ಸಲಹೆಗಳು ಹಾಗೂ ಹಝ್ರತ್ ಪೈಗಂಬರ್(ಸ) ಮತ್ತು ಇಸ್ಲಾಮ್ ಧರ್ಮದ ಬೋಧನೆಗಳ ಬೆಳಕಿನಲ್ಲಿ ಸಲಾಮ್ ಅನ್ನು ರೂಡಿ ನೀಡುವಂತೆ ಕೋರಿಕೆ**

ಹೃದಯ ವೈಶಾಲ್ಯ ಉಂಟಾದರೆ ಎಲ್ಲ ಜಗಳಗಳು ಮತ್ತು ಅತೃಪ್ತಿಗಳು ಕೊನೆಗೊಳ್ಳುವುದು. ಆದ್ದರಿಂದ ವಿಶಾಲ ಹೃದಯವನ್ನು ತೋರಿಸುವುದು ನಿಮ್ಮ ಕರ್ತವ್ಯವಾಗಿದೆ ಎಂದು ಅತಿಥಿಗಳೊಡನೆ ಮತ್ತು ಸೇವೆ ಮಾಡುವವರೊಡನೆ ನಾನು ಹೇಳುತ್ತೇನೆ.

ಇಲ್ಲಿಗೆ ಆಗಮಿಸುವವರು ಪರಸ್ಪರ ಸಲಾಮ್ ಹೇಳುವುದನ್ನು ರೂಢಿಗೊಳಿಸಬೇಕು. ಇದರ ಕಡೆಗೆ ಅತಿ ಹೆಚ್ಚು ಗಮನ ನೀಡಲು ಪ್ರಯತ್ನಿಸಬೇಕು. ಬಹಳ ಅನುಗ್ರಹೀತ ಮತ್ತು ಪರಿಶುದ್ಧವಾದ ಪ್ರಾರ್ಥನೆಯನ್ನು ನಮಗೆ ಕಲಿಸಿಕೊಡಲಾಗಿದೆ. ಆತಿಥೇಯನು ಮತ್ತು ಅತಿಥಿ ಪರಸ್ಪರ ಸಲಾಂ ಹೇಳುವಾಗ ಅವರು ಪ್ರತಿಯೊಂದು ವಿಧದ ಭಯ ಮತ್ತು ಚಿಂತೆಯಿಂದ ಸುರಕ್ಷಿತರಾಗುತ್ತಾರೆ. ಮಾತ್ರವಲ್ಲ ಈ ಪ್ರಾರ್ಥನೆ ಅನ್ಯೋನ್ಯ ಉಪಕಾರಿಯಾಗಿರುತ್ತದೆ.

ಹಝ್ರತ್ ಪೈಗಂಬರ್(ಸ)ರ ಅತ್ಯಂತ ದೊಡ್ಡ ಪ್ರೇಮಿ ಮತ್ತು ಹಝ್ರತ್ ಪೈಗಂಬರ್(ಸ)ರ ಚರ್ಯೆಯನ್ನು ಅನುಸರಿಸುವ ಹಝ್ರತ್ ಮಸೀಹ್ ಮೌಊದ್(ಅ)ರ ಜಮಾಅತಿನಲ್ಲಿ ಸೇರಿದವರಾಗಿದ್ದೇವೆ ಎಂದು ವಾದಿಸುವ ನಾವು ಸಹ ಇಂತಹ ಸಹನೆ, ತಾಳ್ಮೆ, ಕೃತಜ್ಞತೆಯನ್ನು ಸದಾ ತೋರಿಸಬೇಕಾದ ಅಗತ್ಯವಿದೆ. ಈ ಮೂರು ದಿನಗಳಲ್ಲಿ ಅತಿಥಿ ಸತ್ಕಾರದ ಕೊರತೆಯಿದ್ದರೆ, ಅವರನ್ನು ಕ್ಷಮಿಸಿ ಮತ್ತು ವ್ಯವಸ್ಥಾಪಕರನ್ನು ಹೆಚ್ಚು ದೂರಬೇಡಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **26-07-2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔

اِيَّاكَ نَعْبُدُ وَاِيَّاكَ نَسْتَعِيْنُ۔ اِهْدِنَا الصِّرَاطَ الْمُسْتَقِيْمَ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

ಅಲ್ಲಾಹನ ಅನುಗ್ರಹದಿಂದ ಇಂದು ಬ್ರಿಟನಿನ ಜಲ್ಸ ಸಾಲಾನ ಆರಂಭವಾಗುತ್ತಿದೆ. ಇಲ್ಲಿಗೆ ಸಾವಿರಾರು ಜನರು ಧಾರ್ಮಿಕ ಮತ್ತು ಆಧ್ಯಾತ್ಮಿಕ ವಾತಾವರಣದಿಂದ ಪ್ರಯೋಜನ ಪಡೆಯಲಿಕ್ಕಾಗಿ ಬಂದಿರುವರು. ಈ ದಿನಗಳಲ್ಲಿ ಇಲ್ಲಿ ಹದೀಖತುಲ್ ಮಹ್‌ದಿಯಲ್ಲಿ ಒಂದು ತಾತ್ಕಾಲಿಕ ಪಟ್ಟಣವನ್ನು ನಿರ್ಮಿಸಲಾಗಿದೆ. ಈ ವಾತಾವರಣದಲ್ಲಿ ಇದ್ದುಕೊಂಡು ನಾವು ಲೌಕಿಕ ಕೋಲಾಹಲಗಳಿಂದ ಬೇರ್ಪಟ್ಟು ತಮ್ಮ ತಮ್ಮ ಆಧ್ಯಾತ್ಮಿಕ, ನೈತಿಕ ಸ್ಥಿತಿಗಳನ್ನು ಉತ್ತಮಗೊಳಿಸಲು ಹೀಗೆ ಮಾಡಲಾಗಿದೆ.

ಒಟ್ಟಿನಲ್ಲಿ ಇಂತಹ ಸ್ಥಿತಿಗಳಲ್ಲಿ ಅತಿಥಿಗಳಿಗೆ ಯಾವುದಾದರೂ ಸೌಕಾರ್ಯ ಲಭಿಸುವುದರ ಬಗ್ಗೆ ಇರುವ ಚಿಂತೆಗಿಂತ ಯಾವ ರೀತಿಯಲ್ಲಿ ನಾವು ಈ ವಾತಾವರಣದಿಂದ ಹೆಚ್ಚು ಹೆಚ್ಚು ಪ್ರಯೋಜನ ಪಡೆಯುವುದು ಎಂಬ ಚಿಂತೆ ಇರಬೇಕು. ಆದರೆ ಏನೇ ಆಗಲಿ ಮನುಷ್ಯನೊಂದಿಗೆ ಮಾನುಷಿಕ ಅಗತ್ಯಗಳು ಮತ್ತು ಆವಶ್ಯಕತೆಗಳು ಹೊಂದಿಕೊಂಡಿರುತ್ತವೆ. ಆದ್ದರಿಂದ ವ್ಯವಸ್ಥಾಪಕರು ಅತಿಥಿಗಳಿಗಾಗಿ ಸಾಧ್ಯವಾದ ಎಲ್ಲ ಸೌಕರ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತಾರೆ. ಈ ಉದ್ದೇಶಕ್ಕಾಗಿ ಜಲ್ಸ ಸಾಲಾನದ ದಿನಗಳಲ್ಲಿ ಅನೇಕ ವಿಭಾಗಗಳನ್ನು ಸ್ಥಾಪಿಸಲಾಗುತ್ತದೆ. ಸಾವಿರಾರು ಕಾರ್ಯಕರ್ತರು ಸ್ವ ಇಚ್ಛೆಯಿಂದ ತಮ್ಮ ಸೇವೆಗಳನ್ನು ಹಝ್ರತ್ ಮಸೀಹ್ ಮೌಊದ್(ಅ)ರ ಅತಿಥಿಗಳ ಸೇವೆಗಾಗಿ ಅರ್ಪಿಸುತ್ತಾರೆ.

ಈ ಸಂಬಂಧವಾಗಿ ಮೊತ್ತಮೊದಲು ನಾನು ಎಲ್ಲ ಕಾರ್ಯಕರ್ತರೊಡನೆ ಹೇಳಲು ಬಯಸುತ್ತೇನೆ. ತಮ್ಮ ಡ್ಯೂಟಿಗಳನ್ನು

ಉತ್ತಮ ರೀತಿಯಲ್ಲಿ ಈಡೇರಿಸಲು ಪ್ರಯತ್ನಿಸಿರಿ. ಜಲ್ಸದ ಅತಿಥಿಗಳನ್ನು ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಅತಿಥಿಗಳೆಂದು ತಿಳಿದುಕೊಂಡು ಸೇವೆ ಮಾಡಿರಿ. ಅತಿಥಿಗಳಿಂದ ಯಾವುದಾದರೂ ತಪ್ಪು ಸಂಭವಿಸಿದೆ ಎಂದು ನಿಮಗೆ ಅನಿಸಿದರೂ ಕೂಡ ಅದನ್ನು ಕಡೆಗಣಿಸಿರಿ. ಅಲ್ಲಾಹನ ಅನುಗ್ರಹದಿಂದ ಪ್ರತಿಯೊಂದು ದೇಶದಲ್ಲಿ ಅತಿಥಿ ಸತ್ಕಾರ ಮತ್ತು ಉನ್ನತ ನೈತಿಕತೆ ಅಹ್ಮದಿಯಾ ಜಮಾಅತಿನ ವಿಶಿಷ್ಟ ಗುಣವಾಗಿ ಬಿಟ್ಟಿದೆ.

ವಿಶೇಷವಾಗಿ ಜಲ್ಸಾದ ದಿನಗಳಲ್ಲಿ ಈ ಬಗ್ಗೆ ಹೆಚ್ಚಿನ ಗಮನ ನೀಡಲಾಗುತ್ತದೆ. ಹಾಗಾಗಿ ಇಲ್ಲಿಯೂ ಎಂದಿನಂತೆ ಎಲ್ಲಾ ಕಾರ್ಯಕರ್ತರು ಇಸ್ಲಾಮಿನ ಶಿಕ್ಷಣದ ಲಕ್ಷಣವಾದ ಉನ್ನತ ಗುಣಗಳನ್ನು ಪ್ರದರ್ಶಿಸಬೇಕು. ಎಲ್ಲಾ ಕಾರ್ಯಕರ್ತರು ಈ ಉತ್ಸಾಹದಲ್ಲಿ ಕೆಲಸ ಮಾಡುತ್ತಾರೆ ಮತ್ತು ಅದನ್ನು ಮುಂದುವರಿಸುತ್ತಾರೆ ಎಂದು ನನಗೆ ತಿಳಿದಿದೆ. ನಿನ್ನೆ ನಾನು ಕಾರ್ಯಕರ್ತರನ್ನು ಉದ್ದೇಶಿಸಿ ಹೇಳಿದ್ದೇನೆ, ಆದರೆ ನಾನು ಈ ವಿಷಯಗಳನ್ನು ನೆನಪಿಗಾಗಿ ಮತ್ತು ಅನೇಕ ಹೊಸಬರ ತರಬೇತಿಗಾಗಿ ಹೇಳುತ್ತಿದ್ದೇನೆ. ಅತಿಥಿಗಳ ಹೃದಯ ಕನ್ನಡಿಯಂತಿರುತ್ತದೆ ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು, ಅತಿಥಿಗಳು ಭಾವುಕರಾಗಿರುತ್ತಾರೆ. ಅವರ ಕಾಳಜಿ ವಹಿಸಬೇಕು. ಸಣ್ಣವಿಷಯದಿಂದಲೂ ಕನ್ನಡಿಯಂತೆ ಒಡೆಯುತ್ತದೆ. (ಮಾಲ್ಫುಝಾತ್, ಸಂಪುಟ–5, ಪುಟ–406, ಆವೃತ್ತಿ 1984)

ಅತಿಥಿಯ ಹೃದಯವು ತುಂಬಾ ಸೂಕ್ಷ್ಮವಾಗಿರುತ್ತದೆ ಮತ್ತು ಅದು ಕೆಲವೊಮ್ಮೆ ಆ ಎಡವಿಗೆ ಕಾರಣವಾಗುತ್ತದೆ. ಇದು ಕೇವಲ ಕಾರ್ಯಕರ್ತನ ತಪ್ಪು ಎಂದು ಕೆಲವರು ಸರಿಯಾಗಿ ಭಾವಿಸುವುದಿಲ್ಲ. ಜಮಾಅತ್ತಿನ ಶಿಕ್ಷಣ ಇದಕ್ಕೆ ಕಾರಣವಲ್ಲ, ಆದರೆ ಕೆಲವರು ಎಡವುತ್ತಾರೆ. ಆದ್ದರಿಂದ ನೀವು ತುಂಬಾ ಜಾಗರೂಕರಾಗಿರಬೇಕು. ಆದಾಗ್ಯೂ, ಈ ವಿಷಯಗಳು ಸರಿಯಾಗಿ ತರಬೇತಿ ಪಡೆಯದ ಅಥವಾ ಇನ್ನೂ ಜಮಾಅತ್‌ಗೆ ಸೇರದ ಹೊಸಬರಿಗೆ ಸಂಬಂಧಿಸಿದೆ, ಆದರೆ ಇಲ್ಲಿಗೆ ಬರುವ ಹೆಚ್ಚಿನ ಜನರು ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಅಹ್ಮದಿಗಳಾಗಿದ್ದಾರೆ ಮತ್ತು ಅವರಿಗೆ ಇಲ್ಲಿ ಕಷ್ಟತೆಗಳು ಮತ್ತು ಅಸೌಕರ್ಯಗಳನ್ನು ಸಹಿಸಬೇಕಾಗುವುದು ಎಂದು ಚೆನ್ನಾಗಿ ತಿಳಿದುಕೊಂಡು ಬರುತ್ತಾರೆ. ಈಗ ಜಮಾಅತಿನಲ್ಲಿ ಪ್ರವೇಶಿಸದ ಕೆಲವು ಅತಿಥಿಗಳು ಕೂಡ ಇರುತ್ತಾರೆ. ಅವರ ಬಗ್ಗೆ ವಿಶಿಷ್ಟ ಕಾಳಜಿ ವಹಿಸಬೇಕಾಗುತ್ತದೆ. ಎಲ್ಲ ವಿಭಾಗಗಳು, ಅದು ಟ್ರಾಫಿಕ್ ಆಗಿರಲಿ, ಪಾರ್ಕಿಂಗಿನ ಡ್ಯೂಟಿ ಆಗಿರಲಿ, ಆಹಾರ ವಿತರಿಸುವವರಾಗಿರಲಿ, ಶಿಸ್ತುಪಾಲನೆ, ಸ್ವಚ್ಛತೆ, ನೀರು ವಿತರಣೆ ಆಗಿರಲಿ ಅಥವಾ ಯಾವುದೇ ವಿಭಾಗ ಆಗಿರಲಿ; ಅತಿಥಿಗಳಿಗೆ ಸೌಕರ್ಯಕರವಾದ ವ್ಯವಸ್ಥೆ ಮಾಡಲು ಮತ್ತು ಅವರಿಗೆ ಯಾವುದೇ ವಿಧದ ತೊಂದರೆ ಉಂಟಾಗದಂತೆ ಮಾಡಲು ಸಾಧ್ಯವಾದಷ್ಟು ಪ್ರಯತ್ನಿಸಬೇಕಾಗಿದೆ.

ಅದರ ನಂತರ ಅತಿಥಿಗಳಿಗೆ ನಾನು ಕೆಲವು ವಿಷಯಗಳನ್ನು ಹೇಳಲು ಬಯಸುತ್ತೇನೆ. ನೀವು ಒಂದು ಸದುದ್ದೇಶಕ್ಕಾಗಿ ಹಝ್ರ್‌ರತ್ ಮಸೀಹ್ ಮೌಊದ್(ಅ)ರ ಅತಿಥಿಗಳಾಗಿ ಇಲ್ಲಿಗೆ ಬಂದಿರುವಿರಿ. ಲೌಕಿಕ ಗೌರವ ಮತ್ತು ಲೌಕಿಕ ಸೇವೆಯನ್ನು ಬಯಸದೆ ಒಬ್ಬ ನೈಜ ಮುಸ್ಲಿಮನ ವೈಶಿಷ್ಟ್ಯವಾದ ಉನ್ನತ ನೈತಿಕಗುಣಗಳಲ್ಲಿ ಇನ್ನಷ್ಟು ಅಭಿವೃದ್ಧಿ ಉಂಟುಮಾಡಬೇಕೆಂಬ ಗುರಿಯನ್ನು ತಮ್ಮ ಮುಂದಿರಿಸಬೇಕು. ನಿಸ್ಸಂದೇಹವಾಗಿ, ಜಮಾಅತ್ತಿನ ವ್ಯವಸ್ಥೆಯಲ್ಲಿ (ನಿಝಾಮ್–ಎ–ಜಮಾಅತ್), ನಾನು ಹೇಳಿದಂತೆ, ಈ ಪರಿಶುದ್ಧ, ಅನುಗ್ರಹದಾಯಕ ಮತ್ತು ಉದ್ದೇಶಪೂರ್ವಕ ಪ್ರಯಾಣದಲ್ಲಿ ಪ್ರಯಾಣಿಕರಿಗೆ ಮತ್ತು ಅತಿಥಿಗಳಿಗೆ ಸೇವಾ ವ್ಯವಸ್ಥೆ ಇದೆ ಮತ್ತು ವ್ಯವಸ್ಥಾಪಕರು ಅಗತ್ಯತೆಗಳಿಗೆ ಲಭ್ಯವಿರುವ ಯಾವುದೇ ಅಗತ್ಯಗಳನ್ನು ಒದಗಿಸಲು ಪ್ರಯತ್ನಿಸುತ್ತಾರೆ. ಆದರೆ ಅಲ್ಲಾಹನಿಗಾಗಿ ಯಾತ್ರೆ ಮಾಡುವವರಿಗೆ ಲೌಕಿಕವಾದ ಸೌಕರ್ಯಗಳ ಕಡೆಗೆ ಬಹಳ ಕಡಿಮೆ ಗಮನವಿರುತ್ತದೆ. ಕೆಲವೊಮ್ಮೆ ವ್ಯವಸ್ಥೆಗಳಲ್ಲಿ ಕೊರತೆಗಳು ಕಂಡುಬರುತ್ತವೆ. ಆದರೆ ಅವುಗಳನ್ನು ಕಡೆಗಣಿಸಬೇಕು. ನಮ್ಮ ಉದ್ದೇಶ ಆಧ್ಯಾತ್ಮಿಕ ಭೋಜನವನ್ನು ಗಳಿಸುವುದಾಗಿದೆ ಎಂಬ ಯೋಚನೆ ಬರುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನ ಹೃದಯದಲ್ಲಿ ಇರುವುದಾದರೆ ಆತಿಥೇಯ ಮತ್ತು ಅತಿಥಿ ಇಬ್ಬರು ಕೂಡ ಪ್ರೀತಿ ಮತ್ತು ಸ್ನೇಹದಿಂದ ಈ ದಿನಗಳನ್ನು ಕಳೆಯಬಹುದಾಗಿದೆ.

ಆದ್ದರಿಂದ ನೀವು ಲೌಕಿಕ ಪ್ರಯಾಣಿಕರು ಮತ್ತು ಅತಿಥಿಗಳ ವರ್ಗದಲ್ಲಿ ನಿಮ್ಮನ್ನು ತರಲು ಎಂದಿಗೂ ಪ್ರಯತ್ನಿಸಬಾರದು. ನೀವು ಇದನ್ನು ಅರ್ಥಮಾಡಿಕೊಂಡರೆ, ನೀವು ಆತಿಥೇಯರ ದೌರ್ಬಲ್ಯ ಮತ್ತು ನ್ಯೂನತೆಗಳನ್ನು ನಿರ್ಲಕ್ಷಿಸುವುದನ್ನು ಮುಂದುವರಿಸುತ್ತೀರಿ, ಇಲ್ಲದಿದ್ದರೆ ಅಲ್ಲಿನ ಅತಿಥಿಗಳಿಗೆ ಉತ್ತಮವಾಗಿ ನಿರ್ವಹಣೆ ಮಾಡಲಾಗುತ್ತಿದೆ ಅಥವಾ ಆ ಜನರನ್ನು ಹೆಚ್ಚಿನ ಸೌಲಭ್ಯಗಳನ್ನು ಒದಗಿಸಲಾಗುತ್ತಿದೆ ಅಥವಾ ಆಜನರನ್ನು ಉತ್ತಮವಾಗಿ ಉಪಚರಿಸಲಾಗುತ್ತಿದೆ ಎಂದು ಕೆಲವೊಮ್ಮೆ ಅನುಮಾನಗಳ ಉದ್ಭವಿಸುತ್ತವೆ.

ಕೆಲವೊಮ್ಮೆ ಅಂದಾಜಿನ ದೋಷದಿಂದಾಗಿ ಕೆಲವು ದೌರ್ಬಲ್ಯಗಳು ಉದ್ಭವಿಸುತ್ತವೆ ಆದ್ದರಿಂದ ಇವುಗಳನ್ನು ನಿರ್ಲಕ್ಷಿಸಬೇಕು. ನಮ್ಮ ಉದ್ದೇಶ ಆಧ್ಯಾತ್ಮಿಕ ಭೋಜನವನ್ನು ಗಳಿಸುವುದಾಗಿದೆ ಎಂಬ ಯೋಚನೆ ಬರುವ ಪ್ರತಿಯೊಬ್ಬ ಅಹ್ಮದೀ ಮುಸ್ಲಿಮನ ಹೃದಯದಲ್ಲಿ ಇರುವುದಾದರೆ ಆತಿಥೇಯ ಮತ್ತು ಅತಿಥಿ ಇಬ್ಬರು ಕೂಡ ಪ್ರೀತಿ ಮತ್ತು ಸ್ನೇಹದಿಂದ ಈ ದಿನಗಳನ್ನು ಕಳೆಯಬಹುದಾಗಿದೆ. ಆದಾಗ್ಯೂ, ಆಗಮಿಸುವ ಎಲ್ಲ ಅತಿಥಿಗಳೊಂದಿಗೆ ಒಂದೇ ರೀತಿಯಲ್ಲಿ ವರ್ತಿಸಲು ವ್ಯವಸ್ಥಾಪಕರು ಪ್ರಯತ್ನಿಸುತ್ತಾರೆ. ಆದರೂ ಕೆಲವೊಮ್ಮೆ ಹೆಚ್ಚು ಕಮ್ಮಿ ಆಗಿ ಬಿಡುತ್ತದೆ. ಅದನ್ನು ಅತಿಥಿಗಳು ಕಡೆಗಣಿಸಬೇಕು. ಹಝ್ರ್‌ರತ್ ಮಸೀಹ್ ಮೌಊದ್(ಅ) ಅತಿಥಿಗಳಿಗೆ ಬಹಳ ಆದರ ಮತ್ತು ಗೌರವ ಕೊಡುತ್ತಿದ್ದರು. ತಮ್ಮ ಅಗತ್ಯಗಳನ್ನು ಹಿಂಜರಿಕೆ ತೋರಿಸದೇ ಹೇಳಿರಿ ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಅತಿಥಿಗಳೊಡನೆ ಹೇಳುತ್ತಿದ್ದರು. (ಮಲ್‌ಫೂಝಾತ್, ಸಂಪುಟ–3, ಪುಟ–112, 1984) ಆದರೆ ಅದು ಸಾಧಾರಣ ದಿನಗಳ ಸ್ಥಿತಿಯ ಬಗ್ಗೆಯಾಗಿದೆ. ಜಲ್ಸದ ದಿನಗಳಲ್ಲಿ ಅತಿಥಿಗಳಿಗೆ ಒಂದೇ ವ್ಯವಸ್ಥೆ ಇರಬೇಕು ಮತ್ತು ಒಂದೇ ವ್ಯವಸ್ಥೆಯಡಿಯಲ್ಲಿ ಅತಿಥಿ ಸತ್ಕಾರ ಮಾಡಬೇಕು ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳುತ್ತಿದ್ದರು.
(ಸೀರತ್ ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್ರ್‌ರತ್ ಯಾಖೂಬ್ ಅಲೀ ಇರ್ಫಾನಿ ಸಾಹಿಬ್(ರ), ಭಾಗ–3, ಪುಟ–395–396)

ಜಲ್ಸಾದ ದಿನಗಳಲ್ಲಿ ಆತಿಥ್ಯದ ವ್ಯವಸ್ಥೆಯು ಸಾಮಾನ್ಯ ಪರಿಸ್ಥಿತಿಗಿಂತ ಭಿನ್ನವಾಗಿರುತ್ತದೆ ಮತ್ತು ಇಲ್ಲಿಗೆ ಬರುವ ಸಾವಿರಾರು ಅತಿಥಿಗಳಿಗೆ ಒಂದೇ ರೀತಿಯಲ್ಲಿ ಸೌಲಭ್ಯಗಳನ್ನು ಒದಗಿಸುವ ಪ್ರಯತ್ನವಾಗಿರುತ್ತದೆ ಆದರೆ ಆತಿಥ್ಯವಿಲ್ಲದವರು ಬರುತ್ತಾರೆ ಅಥವಾ ವಿದೇಶಿ ಅತಿಥಿಗಳು ಬರುತ್ತಾರೆ ಅವರ ಕೆಲವು ನಿರ್ಬಂಧಗಳ ಕಾರಣ, ಅವರಿಗಾಗಿ ವಿಭಿನ್ನ ವ್ಯವಸ್ಥೆಗಳನ್ನು ಮಾಡಬೇಕಾಗುತ್ತದೆ. ಆದಾಗ್ಯೂ, ಹಝ್ರ್‌ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅತಿಥಿಗಳಿಗೆ ತೋರುವ ಗೌರವದ ಹೊರತಾಗಿಯೂ, ಸಾಮಾನ್ಯ ಸಂದರ್ಭಗಳಲ್ಲಿಯೂ ಸಹ, ಇಲ್ಲಿಗೆ ಬರುವುದರ ನಿಜವಾದ ಉದ್ದೇಶ ದೀನನ್ನು ಕಲಿಯುವುದು, ತಮ್ಮ ಹೃದಯ ಮತ್ತು ಮನಸ್ಸನ್ನು ಪರಿಶುದ್ಧಗೊಳಿಸುವುದು ಹಾಗೂ ಅಲ್ಲಾಹನ ಸಾಮೀಪ್ಯ ಗಳಿಸುವುದರ ಹಂತಗಳನ್ನು ಏರುವುದಾಗಿದೆ ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಅತಿಥಿಗಳಿಗೆ ಮನವರಿಕೆ ಮಾಡಿಸುತ್ತಿದ್ದರು. ಆದ್ದರಿಂದ ಇದೇ ಉದ್ದೇಶಕ್ಕಾಗಿ ನೀವೆಲ್ಲರೂ ಪ್ರತಿ ವರ್ಷ ಇಲ್ಲಿ ಬಂದು ಸೇರುತ್ತೀರಿ. ಜಲ್ಸ ಹಾಲಿನಲ್ಲಿ ಕುಳಿತುಕೊಂಡು ಜಲ್ಸದ ಕಾರ್ಯಕ್ರಮಗಳನ್ನು ಮತ್ತು ಭಾಷಣಗಳನ್ನು ಗಮನವಿಟ್ಟು ಆಲಿಸಿರಿ ಮತ್ತು ಅವುಗಳಿಂದ ಪ್ರಯೋಜನ ಪಡೆಯಲು ಪ್ರಯತ್ನಿಸಿರಿ.

ಅತಿಥಿಗಳಿಗಾಗಿ ನಾನು ಕೆಲವು ಸಾಮಾನ್ಯ ವಿಷಯಗಳನ್ನು ಸಹ ಪ್ರಸ್ತುತಪಡಿಸುತ್ತೇನೆ. ಸತ್ಯವಿಶ್ವಾಸಿಗೆ ತನ್ನ ಸಮಯದ ಸರಿಯಾದ ಬಳಕೆಯು ಬಹಳ ಮುಖ್ಯವಾಗಿದೆ. ಇಂತಹ ಸಾಮಾಹಿಕ ಸಂದರ್ಭಗಳಲ್ಲಿ ಎಲ್ಲರೂ ಕೂಡಿಬಂದಾಗ ದೂರದೂರಿನ ಆತ್ಮೀಯರನ್ನು, ಪರಿಚಿತರನ್ನು ಭೇಟಿಯಾಗಬೇಕು, ಸೇರಬೇಕು ಎಂಬ ಆಸೆ ಇರುತ್ತದೆ. ಈಗ ಸರ್ವಶಕ್ತನಾದ ಅಲ್ಲಾಹನು ಒಂದು ದೇಶದಲ್ಲಿ ವಾಸಿಸುವ ಪರಿಚಯಸ್ಥರನ್ನು ಮತ್ತು ಆತ್ಮೀಯರನ್ನು ಮಾತ್ರವಲ್ಲದೆ ಇತರ ದೇಶಗಳಲ್ಲಿ ವಾಸಿಸುವ ಪರಿಚಯಸ್ಥರನ್ನು ಮತ್ತು ಆತ್ಮೀಯರನ್ನು ಭೇಟಿ ಮಾಡುವ ಸಾಧನವನ್ನು ಸೃಷ್ಟಿಸಿದ್ದಾನೆ ಮತ್ತು ಹಝ್ರ್‌ರತ್ ಮಸೀಹ್ ಮೌಊದ್(ಅ)ರಿಗೆ ಅಲ್ಲಾಹನು ತನ್ನ ಅನುಗ್ರಹದಿಂದ ಎಂತಹ ಜಮಾಅತನ್ನು ದಯಪಾಲಿಸಿರುವನು ಎಂದರೆ, ಅದು ದೇಶಗಳ ಮತ್ತು ಸಮುದಾಯಗಳ ಗಡಿಗಳನ್ನು ಹಾಗೂ ಪಂಗಡಗಳನ್ನು ಕೊನೆಗೊಳಿಸಿದೆ ಮತ್ತು ಒಂದು ಶ್ರೇಷ್ಠವಾದ ಸಹೋದರತೆಯ ಬುನಾದಿ ಹಾಕಲ್ಪಟ್ಟಿದೆ. ಜಮಾಅತಿನ ಸಾಹೋದರ್ಯ ಸಂಬಂಧ ಸುದೃಢಗೊಳಿಸುವುದು ಕೂಡ ಜಲ್ಸದ ಒಂದು ಉದ್ದೇಶವಾಗಿದೆ ಎಂದು ಹಝ್ರ್‌ರತ್ ಮಸೀಹ್ ಮೌಊದ್(ಅ) ಹೇಳಿದ್ದರು. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ–6, ಪುಟ–394) ಪರಸ್ಪರ ಭೇಟಿಯ ಮೂಲಕ ಈ ಉದ್ದೇಶ ಈಡೇರುತ್ತಿದೆ ಎಂಬುದು ಸ್ಪಷ್ಟ. ಆದರೆ ಸತ್ಯವಿಶ್ವಾಸಿ ತನ್ನ ಸಮಯವನ್ನು ಸರಿಯಾಗಿ ವಿನಿಯೋಗಿಸಬೇಕು ಎಂಬುದು ಅತ್ಯಗತ್ಯವಾಗಿದೆ. ಅದಕ್ಕಾಗಿ ಜಲ್ಸದ ಪೂರ್ತಿ ದಿನದ ಕಾರ್ಯಕ್ರಮದ ನಂತರ ಲಭಿಸುವ ಸಮಯದಲ್ಲಿ ಪರಸ್ಪರ ಭೇಟಿಯಾಗಿರಿ, ಒಟ್ಟಿಗೆ ಕುಳಿತುಕೊಳ್ಳಿರಿ, ಮಾತನಾಡಿರಿ ಮತ್ತು ಸಂಬಂಧಗಳನ್ನು ವರ್ಧಿಸಿರಿ. ಆದರೆ ಸಮಯ ವ್ಯರ್ಥವಾಗುವ ರೀತಿಯಲ್ಲಿ ಅದರಲ್ಲಿ ತಲ್ಲೀನರಾಗಬೇಡಿರಿ.

ಕೆಲವೊಮ್ಮೆ ಕೆಲವು ಹಳೆಯ ಪರಿಚಯಸ್ಥರ ಭೇಟಿಗಳು ಬಹಳ ಸಮಯದ ನಂತರ ಭೇಟಿಯಾಗುತ್ತಿರುವುದರಿಂದ ಈ ಭೇಟಿಗಳು ಎಷ್ಟು

ದೀರ್ಘವಾಗುತ್ತವೆ ಎಂದರೆ ಅವರು ಇಡೀ ರಾತ್ರಿ ಆಹ್ಲಾದಕರ ಹರಟೆಯಲ್ಲಿ ಕಳೆಯುತ್ತಾರೆ ಮತ್ತು ತಹಜುದ್ ನಮಾಝ್ ಒಂದು ಕಡೆ ಇರಲಿ ಫಜರ್ ನಮಾಝ್ ನಿರ್ವಹಿಸುವುದಕ್ಕೂ ಅವರಿ ತಮ್ಮ ಕಣ್ಣುಗಳನ್ನು ತೆರೆಯಲು ಸಾಧ್ಯವಾಗುವುದಿಲ್ಲ.

ಮತ್ತೆ ಆಹಾರದ ಡೇರೆಯಲ್ಲಿ ಜನರು ಮಾತನಾಡುವುದರಲ್ಲಿ ನಿರತರಾಗುತ್ತಾರೆ ಮತ್ತು ಊಟ ಮಾಡುವಾಗ ಅವರು ದೀರ್ಘ ಮಾತುಕತೆಗಳಲ್ಲಿ ನಿರತರಾಗುತ್ತಾರೆ ಎಂಬ ಅಂಶದಿಂದಾಗಿ ಕೆಲವೊಮ್ಮೆ ಆಡಳಿತವು ಸಮಸ್ಯೆಯನ್ನು ಎದುರಿಸುತ್ತದೆ. ಕಾರ್ಯಕರ್ತರಿಗೆ ನಮಾಝ್ ಸಮಯವಾಗಿದೆ ಅಥವಾ ಬಹಳ ಸಮಯವಾಗುತ್ತಿದೆ ಎಂದು ಮತ್ತೆ ಮತ್ತೆ ನೆನಪಿಸಬೇಕಾದಷ್ಟು ಸಮಯ ಕಳೆಯುತ್ತಾರೆ. ಆದಾಗ್ಯೊ, ಅದೇ ರೀತಿ ಮನೆಯಲ್ಲಿ ಇರುವವರಿಗೂ ತೊಂದರೆಯಾಗಬಹುದು ಹಾಗಾಗಿ ಸಂಯಮದಿಂದ ವರ್ತಿಸಬೇಕು. ಅತಿಥಿಗಳು ವಿಶೇಷವಾಗಿ ಆತಿಥೇಯರು ತಮ್ಮ ಕೆಲಸವನ್ನು ಪೂರ್ಣಗೊಳಿಸಬೇಕು ಮತ್ತು ಮುಂದಿನ ಬಾರಿಗೆ ತಯಾರಿ ಮಾಡಬೇಕು ಎಂದು ಕಾಳಜಿ ವಹಿಸಬೇಕು.

ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್ ಅವರ ಬಳಿಗೆ ಬಂದ ಅತಿಥಿಗಳು ಮಾತನಾಡುವುದರಲ್ಲಿ ತಮ್ಮ ಸಮಯ ವ್ಯರ್ಥ ಮಾಡಬಾರದು ಎಂಬುದೇ ಸರ್ವಶಕ್ತನಾದ ಅಲ್ಲಾಹನ ಆದೇಶವಾಗಿತ್ತು. ಆಹಾರ ಮುಗಿಸಿದ ಮೇಲೆ ಎದ್ದು ಹೊರಟಿರಿ. (ಅಲ್-ಅಹ್‌ಝಾಬ್: 54) ಆದ್ದರಿಂದ, ವಿಶೇಷವಾಗಿ ಆಹಾರದ ಡೇರೆಯಲ್ಲಿ ವಿಪರೀತವಾದಾಗ, ಕೆಲವೊಮ್ಮೆ ಆಹಾರವನ್ನು ಶೀಫ್ಟ್‌ನಲ್ಲಿ ನೀಡಬೇಕಾಗುತ್ತದೆ. ಆದುದರಿಂದ ಊಟವಾದ ಕೂಡಲೇ ಎದ್ದು ಬೇರೆಯವರು ಕೂಡ ಬಂದು ಆರಾಮವಾಗಿ ಊಟ ಮಾಡುವಂತೆ ಮಾಡಬೇಕು. ಹೀಗೆ ಮಾಡುವುದರಿಂದ ಈ ಸಂಗತಿಗಳು ಸಂಭವಿಸುವುದಿಲ್ಲ, ಮತ್ತು ಯಾವುದೇ ಸಂದೇಹಗಳು ಉದ್ಭವಿಸುವುದಿಲ್ಲ ಮತ್ತು ಈ ಆಹ್ಲಾದಕರ ವಾತಾವರಣದಲ್ಲಿ ಎಲ್ಲಾ ಕೆಲಸಗಳು ಮುಂದುವರಿಯುತ್ತವೆ.

ಇಷ್ಟು ದೊಡ್ಡ ಪ್ರಮಾಣದಲ್ಲಿ ಜನರು ಒಟ್ಟುಗೂಡುವಾಗ ಕೆಲವು ಅಹಿತಕರವಾದ ಸಂಗತಿಗಳು ಕೂಡ ನಡೆಯುತ್ತವೆ. ಕೆಲವೊಮ್ಮೆ, ವ್ಯವಸ್ಥೆಯಿಂದ ದೂರುಗಳ ಕಾರಣದಿಂದ ಅತಿಥಿಗಳು ಕಾರ್ಯಕರ್ತರನ್ನು ಕೆಟ್ಟದಾಗಿ ಬಾಯಿಬಿಟ್ಟರು, ಕಾರ್ಯಕರ್ತನು ಮುಂದೆಯಿಂದ ಪ್ರತಿಕ್ರಿಯಿಸಿದನು, ನಂತರ ವಿಷಯ ಉಲ್ಬಣಗೊಂಡಿತು. ಉಲ್ಬಣವು ಉಲ್ಬಣಗೊಳ್ಳುತ್ತದೆ ಮತ್ತು ಹೀಗೆ ದ್ವೇಷಗಳ ಸರಣಿಯು ಪ್ರಾರಂಭವಾಗುತ್ತದೆ. ಆಕಸ್ಮಿಕ ಘಟನೆಗಳಾದರೂ ವಾತಾವರಣ ಉದ್ವಿಗ್ನವಾಗುತ್ತದೆ. ಇತರ ಜನರ ಮೇಲೂ ಇದರ ಪರಿಣಾಮ ಬೀರುತ್ತದೆ. ದೂರು ನೀಡುವವರು ಅಥವಾ ತಪ್ಪು ಹೇಳುವವರು ಇಲ್ಲಿ ವಾಸಿಸುವ ಜನರಾಗಿದ್ದರೆ ಅಂದರೆ ಯುಕೆಯಲ್ಲಿ ವಾಸಿಸುವವರಾಗಿದ್ದರೆ, ಈ ಸರಪಳಿಯು ಇನ್ನೂ ಸುದೀರ್ಘವಾಗುತ್ತದೆ ಮತ್ತು ನಂತರ ಅದು ಇತರ ಸಂದರ್ಭಗಳಲ್ಲಿಯೂ ವ್ಯಕ್ತವಾಗುತ್ತದೆ ಮತ್ತು ಇಂತಹ ಸನ್ನಿವೇಶಗಳು ಕೇವಲ ಇಲ್ಲಿ ಮಾತ್ರವಲ್ಲದೇ ಇತರ ದೇಶಗಳಲ್ಲಿಯೂ ಸಂಭವಿಸುತ್ತವೆ.

ನೆನಪಿಡಿರಿ, ಯಥಾರ್ಥ ಸತ್ಯವಿಶ್ವಾಸಿಯ ಬಗ್ಗೆ ಸರ್ವಶಕ್ತನಾದ ಅಲ್ಲಾಹನು ನುಡಿದಿರುವುದೇನೆಂದರೆ ಆತನು ಕೋಪವನ್ನು ನಿಯಂತ್ರಿಸುವವನಾಗಿರುತ್ತಾನೆ. ಆದ್ದರಿಂದ ಜಲ್ಸದ ವಾತಾವರಣದ ಪರಿಶುದ್ಧತೆಯನ್ನು ಮುಂದಿರಿಸಿರಿ ಮತ್ತು ಪರಸ್ಪರರ ತಪ್ಪುಗಳನ್ನು ಕಡೆಗಣಿಸಿರಿ. ಕ್ಷಮೆ ಮತ್ತು ಕರುಣೆಯಿಂದ ವರ್ತಿಸಿರಿ.

ತಮ್ಮ ಮೇಲೆ ದೌರ್ಜನ್ಯ ನಡೆದಿದೆ ಎಂದು ಅನಿಸಿದರೂ ಸಹನೆ ಮತ್ತು ಧೈರ್ಯದಿಂದ ವರ್ತಿಸಿರಿ. ತಾಳ್ಮೆ ಮತ್ತು ಧೈರ್ಯವನ್ನು ತೋರಿ ಮತ್ತು ಅತಿಥಿಯಿಂದ ನಿಂದನೆಗೆ ಒಳಗಾದರೂ ಕಾರ್ಯಕರ್ತರು ತಮ್ಮ ಕೋಪವನ್ನು ನಿಯಂತ್ರಣದಲ್ಲಿರಿಸಬೇಕು.

ಅದೇ ರೀತಿ ಕಾರ್ಡ್‌ಗಳ ತಪಾಸಣೆಯೂ ಇದೆ ಮತ್ತು ಸೆಕ್ಯುರಿಟಿಯೂ (ಭದ್ರತೆ) ಇದೆ ಏಕೆಂದರೆ ಇಂದಿನ ಪರಿಸ್ಥಿತಿಯಲ್ಲಿ ಭದ್ರತಾ ತಪಾಸಣೆ ಕೂಡ ಬಹಳ ಮುಖ್ಯವಾಗಿದೆ, ಹೆಚ್ಚಿನ ಕಾಳಜಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ವಿವಿಧ ಹಂತಗಳ ಮೂಲಕ ಹೋಗುವುದರಿಂದ, ಇದು ಕೆಲವು ಜನರಿಗೆ ತೊಂದರೆಯು ಆಗಬಹುದು ಮತ್ತು ಇದು ಬಹಳ ಸಮಯ ತೆಗೆದುಕೊಳ್ಳಬಹುದು ಮತ್ತು ವಿಶೇಷವಾಗಿ ಮಹಿಳೆಯರಿಗೆ ಇದು ಸಮಸ್ಯೆಯಾಗಿದೆ ಏಕೆಂದರೆ ಅವರೊಂದಿಗೆ ಮಕ್ಕಳಿರುತ್ತಾರೆ ಮತ್ತು ಅವರ ವಸ್ತುಗಳು ಸಹ ಇರುತ್ತವೆ. ಕೆಲವೊಮ್ಮೆ ಮಹಿಳೆಯರು ಹಲವಾರು ಚೀಲಗಳನ್ನು ಒಯ್ಯುತ್ತಾರೆ ಮತ್ತು ಪ್ರತಿ ಚೀಲವನ್ನು ಪರಿಶೀಲಿಸಲು ಸಮಯ ತೆಗೆದುಕೊಳ್ಳುತ್ತದೆ. ಆದುದರಿಂದ ಮೊದಲು ಸ್ತ್ರೀಯರು ಪ್ರಯತ್ನಿಸಬೇಕು ಇವತ್ತು ಜಾಸ್ತಿ ಸಾಮಾನು ತಂದಿದ್ದರೆ ಪರವಾಗಿಲ್ಲ ಆದರೆ ಹೊರಗಿನಿಂದ ಬರುವವರು ಜಲ್ಸಾ ಸಭಾಂಗಣದಲ್ಲಿ ಇರದೇ ಹೊರಗಿನಿಂದ ಬರುವವರು ಸಾಮಾನ್ಯವಾಗಿ ಹೊರಗಿನಿಂದಲೇ ಬರುತ್ತಾರೆ ಅವರು ಮುಂದಿನ ದಿನಗಳಲ್ಲಿ ಚೆಕ್-ಇನ್‌ನಲ್ಲಿ ಕಳೆದ ಸಮಯವನ್ನು ಕಡಿಮೆ ಮಾಡಲು ನಿಮ್ಮ ಸಾಮಾನುಗಳನ್ನು ಕಡಿಮೆ ಪ್ರಮಾಣದಲ್ಲಿ ಸಾಮಾನನ್ನು ತರಬೇಕು. ಮಕ್ಕಳಿರುವವರು ಕೂಡ ಮಕ್ಕಳಿಗೆ ಬೇಕಾದ ವಸ್ತುಗಳನ್ನು ಮಾತ್ರ ತರಬೇಕು. ಅನಗತ್ಯ ವಸ್ತುಗಳನ್ನು ತರಬೇಡಿ. ಇದು ಯಾವುದೇ ಕಾರಣವಿಲ್ಲದೆ ವಿಳಂಬಕ್ಕೆ ಕಾರಣವಾಗುತ್ತದೆ. ಸಮಯ ವ್ಯರ್ಥವಾಗುತ್ತದೆ. ಆಡಳಿತದ ಸಮಯವೂ ವ್ಯರ್ಥವಾಗುತ್ತದೆ ಮತ್ತು ಜನರ ಸಮಯವೂ ವ್ಯರ್ಥವಾಗುತ್ತದೆ. ಜನರು ಸರದಿಯಲ್ಲಿ ನಿಂತು ಕಾಯಬೇಕಾಗುತ್ತದೆ ಆದ್ದರಿಂದ ನಂತರ ಅವರು ಆಡಳಿತಕ್ಕೆ ದೂಷಿಸುತ್ತಾರೆ, ಆದರೂ ಕೆಲವೊಮ್ಮೆ ತಪ್ಪು ಜಲ್ಸಾಕ್ಕೆ ಸೇರಿದ ಜನರದ್ದಾಗಿರುತ್ತದೆ ಏಕೆಂದರೆ ಜನರ ವಸ್ತುಗಳು ಎಷ್ಟಿರತ್ತೆ ಎಂದರೆ ನಾನು ಹೇಳಿದ ಹಾಗೆ ತಪಾಸಣೆ ವಿಳಂಬವಾಗುತ್ತದೆ.

ಅದೇ ರೀತಿ ಸತ್ಯವಿಶ್ವಾಸಿಗೆ ಹಝ್ರತ್ ಪೈಗಂಬರ್(ಸ) ಅವರ ಆಜ್ಞೆ ಮತ್ತು ಉಪದೇಶವು ಹೀಗಿದೆ: ನೀವು ಸಂಬಂಧವನ್ನು ಮುರಿದವರೊಂದಿಗೆ ಸಹ ಸಂಬಂಧವನ್ನು ಸ್ಥಾಪಿಸಬೇಕು. ನಿಮಗೆ ನೀಡದವನಿಗೂ ನೀನು ನೀಡು. ಅವನ ಕಷ್ಟದ ಸಮಯದಲ್ಲಿ ನಿಮಗೆ ಸಹಾಯ ಮಾಡಲಿಲ್ಲ ಆದ್ದರಿಂದ ಅವನಿಗೆ ಅಗತ್ಯವಿರುವಾಗ ಸೇಡು ತೀರಿಸಿಕೊಳ್ಳುತ್ತಾ ನೀವು ಅವನಿಗೆ ಸಹಾಯ ಮಾಡದಿರುವುದಲ್ಲ. ಹಝ್ರತ್ ಪೈಗಂಬರ್(ಸ) ನುಡಿದರು: ನಿಮ್ಮ ಬಗ್ಗೆ ಕೆಟ್ಟದಾಗಿ ಮಾತನಾಡುವವರನ್ನೂ ಕ್ಷಮಿಸಿ. (ಮುಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ-5, ಪುಟ-373, ಹದೀಸ್-15703, ಆಲಂ ಅಲ್ ಕಿತಾಬ್, ಬೈರುತ್, 1998)

ಹಾಗಾಗಿ ಇಲ್ಲಿ ತಪ್ಪು ಸರಿ ಎಂದು ಹೇಳುವ ಪ್ರಶ್ನೆಯೇ ಇಲ್ಲ, ಇಲ್ಲಿ ಕಾರ್ಯಕರ್ತರಿಗೆ ವಿಧಿಸಿರುವ ಕರ್ತವ್ಯ ಆಗಿದೆ. ಇಲ್ಲಿ ಕಾರ್ಯಕರ್ತರ ಅಚಾತುರ್ಯದಿಂದ ತಪ್ಪು ಮಾಡಿದರೆ ಅಥವಾ ತಪಾಸಣೆ ವೇಳೆ ವಿಳಂಬ ಮಾಡಿದರೆ ಅಥವಾ ಯಾರೊಬ್ಬರ ಕಾರ್ಡ್‌ನಲ್ಲಿ ಆಕ್ಷೇಪಣೆ ಬಂದರೆ ದೂರು ನೀಡುವ ಬದಲು ಧೈರ್ಯ ತೋರಬೇಕು. ಹಝ್ರತ್ ಪೈಗಂಬರ್(ಸ) ಹೇಳಿದ ಈ ವಿಷಯಗಳು ಹೃದಯ ವೈಶಾಲ್ಯಕ್ಕೆ ಕಾರಣವಾಗುತ್ತವೆ.

ಹೃದಯ ವೈಶಾಲ್ಯ ಉಂಟಾದರೆ ಎಲ್ಲ ಜಗಳಗಳು ಮತ್ತು ಅತೃಪ್ತಿಗಳು ಕೊನೆಗೊಳ್ಳುವುದು. ಆದ್ದರಿಂದ ವಿಶಾಲ ಹೃದಯವನ್ನು ತೋರಿಸುವುದು ನಿಮ್ಮ ಕರ್ತವ್ಯವಾಗಿದೆ ಎಂದು ಅತಿಥಿಗಳೊಡನೆ ಮತ್ತು ಸೇವೆ ಮಾಡುವವರೊಡನೆ ನಾನು ಹೇಳುತ್ತೇನೆ. ಪರಿಶೀಲನೆ ಮಾಡುವವರು ಒಳಬರುವ ಅತಿಥಿಗಳಿಗೆ ಸಾಧ್ಯವಾದಷ್ಟು ಅನುಕೂಲವನ್ನು ಒದಗಿಸಲು ಪ್ರಯತ್ನಿಸಬೇಕು ಮತ್ತು ವ್ಯವಸ್ಥಾಪಕರಿಗೆ ಹೆಚ್ಚಿನ ಸಿಬ್ಬಂದಿಯನ್ನು ನೇಮಿಸಬೇಕಾದರೆ ನೇಮಿಸಿರಿ, ವಿಶೇಷವಾಗಿ ವಿಪರೀತ ಸಮಯದಲ್ಲಿ.

ಹಝ್ರತ್ ಮಸೀಹ್ ಮೌಊದ್(ಅ)ರ ಬಯಕೆ ಅನುಸಾರ ಪರಸ್ಪರ ಪ್ರೀತಿ ಮತ್ತು ಸಹೋದರತೆಯ ಮಾದರಿಯಾಗಲು ನೀವು ಪ್ರಯತ್ನಿಸಬೇಕು. (ಶಹಾದತುಲ್ ಖುರ್‌ಆನ್, ರೂಹಾನಿ ಖಝಾಈನ್, ಸಂಪುಟ-6, ಪುಟ-394) ಇದನ್ನೇ ಅಲ್ಲಾಹನು ಸತ್ಯವಿಶ್ವಾಸಿಗಳ ಕುರಿತು ಹೇಳಿರುವನು. ಆದ್ದರಿಂದ ಸಣ್ಣ ಪುಟ್ಟ ವಿಷಯಗಳಲ್ಲಿ ಸಿಕ್ಕಿಬೀಳುವುದಕ್ಕೆ ಬದಲಾಗಿ ತಮ್ಮ ಜೀವಿತದ ಉದ್ದೇಶವನ್ನು ಗಳಿಸಲು ಪ್ರಯತ್ನಿಸಬೇಕು. ಅದು ಅಲ್ಲಾಹನ ಮುಂದೆ ಬಾಗುವುದರಿಂದ, ಸಾಷ್ಟಾಂಗ ಮಾಡುವುದರಿಂದ, ಆರಾಧನೆ ಮತ್ತು ದೇವಸ್ಮರಣೆ ಮಾಡುವುದರಿಂದ ಲಭಿಸುತ್ತದೆ. ಇಲ್ಲಿಗೆ ಆಗಮಿಸಿರುವ ಪ್ರತಿಯೊಬ್ಬ ಅತಿಥಿ ತಮ್ಮ ಯಾತ್ರೆಯನ್ನು ಅಲ್ಲಾಹನಿಗಾಗಿ ಮಾತ್ರ ಮೀಸಲಾಗಿಡಲು ಪ್ರಯತ್ನಿಸಬೇಕು. ಸೇವಕರು ಮತ್ತು ಅತಿಥಿಗಳು ನೆನಪಿಡಬೇಕಾದ ಮತ್ತೊಂದು ಸಂಗತಿಯೇನೆಂದರೆ, ಕೆಲವು ಅಹ್ಮದಿಯೇತರರು ಮತ್ತು ಮುಸ್ಲಿಮೇತರರು ಸಹ ಇಲ್ಲಿಗೆ ಬಂದಿರುತ್ತಾರೆ. ಆದ್ದರಿಂದ ಉನ್ನತ ಸ್ವಭಾವಗುಣಗಳನ್ನು ತೋರಿಸಿದರೆ, ಅದು ಮೌನವಾದ ತಬ್ಲೀಗ್ ಆಗುವುದು. ಅನ್ಯರ ಮೇಲೆ ಅದರ ಆಳವಾದ ಪ್ರಭಾವ ಉಂಟಾಗುತ್ತದೆ ಮತ್ತು ಅವರಿಗೆ ಇಸ್ಲಾಮಿನ ಕಡೆಗೆ ಗಮನ ಉಂಟಾಗುತ್ತದೆ ಹಾಗೂ ಅವರು ಇಸ್ಲಾಮಿನ ಪಾಠಗಳ ವೈಶಿಷ್ಟ್ಯಗಳಿಂದ ಪ್ರಭಾವಿತರಾಗುತ್ತಾರೆ.

ಒಂದು ಮುಖ್ಯವಾದ ಸಂಗತಿಯೇನೆಂದರೆ, ಇಲ್ಲಿಗೆ ಆಗಮಿಸುವವರು ಪರಸ್ಪರ ಸಲಾಮ್ ಹೇಳುವುದನ್ನು ರೂಢಿಗೊಳಿಸಬೇಕು. ಇದರ ಕಡೆಗೆ ಅತಿ ಹೆಚ್ಚು ಗಮನ ನೀಡಲು ಪ್ರಯತ್ನಿಸಬೇಕು. ಬಹಳ ಅನುಗ್ರಹೀತ ಮತ್ತು ಪರಿಶುದ್ಧವಾದ ಪ್ರಾರ್ಥನೆಯನ್ನು ನಮಗೆ ಕಲಿಸಿಕೊಡಲಾಗಿದೆ. ಆತಿಥೇಯನು ಮತ್ತು ಅತಿಥಿ ಪರಸ್ಪರ ಸಲಾಂ ಹೇಳುವಾಗ ಅವರು ಪ್ರತಿಯೊಂದು ವಿಧದ ಭಯ ಮತ್ತು ಚಿಂತೆಯಿಂದ ಸುರಕ್ಷಿತರಾಗುತ್ತಾರೆ. ಮಾತ್ರವಲ್ಲ ಈ ಪ್ರಾರ್ಥನೆ ಅನ್ಯೋನ್ಯ ಉಪಕಾರಿಯಾಗಿರುತ್ತದೆ. ಆದ್ದರಿಂದ ಈ ಬಗ್ಗೆ ಈ ದಿನಗಳಲ್ಲಿ ಹೆಚ್ಚಿನ ಗಮನ ನೀಡಿರಿ. ಹೀಗೆ ನಾವು ಎಲ್ಲೆಡೆ ಸಮಾಧಾನ, ಪ್ರೀತಿ ಮತ್ತು ಸ್ನೇಹವನ್ನು ಹರಡುವವರಾಗಲಿ ಹಾಗೂ ಈ ವಾತಾವರಣ ಅಲ್ಲಾಹನ ಸಲುವಾಗಿ ಪ್ರೀತಿ ಮತ್ತು ಸಹೋದರತೆಯ ವಾತಾವರಣವಾಗಲಿ. ಪ್ರತಿಯೊಂದು ವಿಧದ ಸ್ವಾರ್ಥಗಳಿಂದ ತಮ್ಮನ್ನು ಸ್ವತಃ ದೂರವಿರಿಸಲು ನಾವು ಪ್ರಯತ್ನಿಸಬೇಕಾಗಿದೆ. ಈ ದಿನಗಳಲ್ಲಿ ತಮ್ಮ

ಜೀವಿತಗಳಲ್ಲಿ ಒಂದು ಪರಿವರ್ತನೆ ಉಂಟುಮಾಡಲು ಪ್ರಯತ್ನಿಸಿರಿ. ನಮಗೆ, ಪ್ರತಿಯೊಂದು ವಿಷಯದಲ್ಲೂ, ಹಝ್ರತ್ ಪೈಗಂಬರ್(ಸ.ಅ) ಅವರ ಹಗೂ ಸಹಾಬೀಯರು ಮಾದರಿಯಾಗಿದ್ದಾರೆ. ಹಝ್ರತ್ ಪೈಗಂಬರ್(ಸ)ರ ಕಾಲದಲ್ಲಿ ಅತಿಥಿಗಳ ಉನ್ನತ ನೈತಿಕತೆಯು ಹೇಗಿತ್ತು ಎಂದರೆ ಹಝ್ರತ್ ಪೈಗಂಬರ್(ಸ)ರ ಸಹಾಬೀಯರ ದೈವಿಕ ನೆರವಿನ ಕಾರಣದಿಂದ ಅವರಲ್ಲಿ ಪ್ರತಿಯೊಬ್ಬರು ಪವಿತ್ರ ಖುರ್‌ಆನ್‌ನ ಪ್ರತಿಯೊಂದು ಆಜ್ಞೆಯನ್ನು ಪಾಲಿಸಲು ಪ್ರಯತ್ನಿಸುತ್ತಿದ್ದರು. ಮತ್ತು ಪವಿತ್ರ ಖುರ್‌ಆನ್‌ನ ಆಜ್ಞೆಯಂತೆ ಅತಿಥಿಗಳು ಯಾರೊಬ್ಬರ ಮನೆಗೆ ಹೋದರೆ ಮತ್ತು ಮನೆಯ ಮಾಲೀಕರು ಹಿಂತಿರುಗಿ ಎಂದು ಹೇಳಿದರೆ. ಆ ಸಮಯದಲ್ಲಿ ಅವನು ಸಂತೋಷದಿಂದ ಹಿಂತಿರುಗಬೇಕು. ಹೃದಯ ವೈಶಾಲ್ಯ ತೋರಬೇಕು. ಓರ್ವ ಸಹಾಬಿ ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನ ಈ ಆದೇಶವನ್ನು ಪೂರೈಸಲು ನಾನು ಪ್ರಯತ್ನಿಸುತ್ತಿದ್ದೆ ಮತ್ತು ನಾನು ಯಾರೊಬ್ಬರ ಮನೆಗೆ ಹೋದರೆ ಆ ಮನೆಯ ಮಾಲೀಕನು ನನಗೆ ಹಿಂದಿರುಗಲು ಹೇಳಬೇಕು ಆದ್ದರಿಂದ ನಾನು ಆತನ ಈ ಮಾತುಗಳನ್ನು ಆಲಿಸಿ ಪವಿತ್ರ ಖುರ್‌ಆನ್‌ನ ಆದೇಶದಂತೆ ಅಲ್ಲಾಹನ ಸಂತೃಪ್ತಿ ಪಡೆಯುತ್ತ ಸಂತೋಷದಿಂದ ಅಲಿಂದ ಹಿಂದಿರುಗಬೇಕೆಂದು ಬಯಸಿದ್ದೆ ಆದರೆ ನನ್ನ ಪ್ರಯತ್ನಗಳ ಹೊರತಾಗಿಯೂ, ನನಗೆ ಈ ಅವಕಾಶ ಎಂದೂ ಲಭಿಸಲಿಲ್ಲ ಏಕೆಂದರೆ ಯಾರೂ ಸಹ ನನ್ನನ್ನು ಮನೆಯಿಂದ ಹಿಂತಿರುಗಿಸಲಿಲ್ಲ. (ತಫ್ಸಿರ್ ದರ್ಮರ್ಸೂರ್, ಸಂಪುಟ–5 (ಅನುವಾದ), ಪುಟ–116, ಝಿಯಾ–ಉಲ್–ಖುರ್‌ಆನ್ ಪಬ್ಲಿಕೇಷನ್ಸ್, ಲಾಹೋರ್, 2006)

ಆದ್ದರಿಂದ ಇವು ಆತಿಥೇಯರಿಗೆ, ಕುಟುಂಬಕ್ಕೆ ಸೇರಿದವರಿಗೆ ಮತ್ತು ಅವರ ಅತಿಥಿಗಳಾಗಿದ್ದ ಯಾರೊಬ್ಬರ ಮನೆಗೆ ಭೇಟಿ ನೀಡುವವರಿಗೆ ಸೇರಿದ ಉನ್ನತ ನೈತಿಕತೆಗಳಾಗಿವೆ. ಆದ್ದರಿಂದ, ಇದು ಹೃದಯ ವೈಶಾಲ್ಯವಾಗಬೇಕು. ಒಬ್ಬ ವ್ಯಕ್ತಿಯಲ್ಲಿ ಇಂತಹ ಹೃದಯ ವೈಶಲ್ಯ ಹೊಂದಿದರೆ ಅಲ್ಲಿರುವ ಸಣ್ಣ ಪುಟ್ಟ ವಿಷಯಗಳನ್ನು ನಿರ್ಲಕ್ಷಿಸುತ್ತಾನೆ.

ನಾನು ಪರಸ್ಪರ ಒಬ್ಬರಿಗೊಬ್ಬರು ಸಲಾಮ್ ಮಾಡುವುದರ ಬಗ್ಗೆ ಹೇಳಿರುವೆನು. ಈ ಬಗ್ಗೆ ನೆನಪಿಡುವ ಇನ್ನೊಂದು ವಿಷಯವೆಂದರೆ:

ಹಝ್ರತ್ ಪೈಗಂಬರ್(ಸ) ಹೀಗೆ ಹೇಳಿರುವರು. ಸಲಾಮನ್ನು ಹರಡಿರಿ. ಅದಕ್ಕಾಗಿ ಪರಿಚಿತರಿಗೂ ಅಪರಿಚಿತರಿಗೂ ನೀವು ಸಲಾಂ ಹೇಳಿರಿ.

(ಸಹೀಹ್ ಅಲ್–ಬುಖಾರಿ, ಕಿತಾಬ್ ಅಲ್–ಈಮಾನ್, ಅಧ್ಯಾಯ (ಅಫ್ಶಾ) ಅಸ್ಸಲಾಮ್ ಮಿನಲ್ ಇಸ್ಲಾಮಿ, ಹದೀಸ್–28)

ಸಲಾಮ್ ಅನ್ನು ರೂಢಿ ಮಾಡಲು ನೀವು ಪರಿಚಿತರಿಗೂ ಅಪರಿಚಿತರಿಗೂ ಸಲಾಮ್ ಮಾಡುವ ಮಟ್ಟಿಗೆ ಹೋಗಬೇಕೆಂದು ಆದೇಶಿಸಲಾಗಿದೆ. ಆದ್ದರಿಂದ ಇಂತಹ ಸಲಾಮ್ ಹೇಳುವ ರೂಢಿಯನ್ನು ಸ್ಥಾಪಿಸಿದಾಗ, ಜಮಾಅತ್ತಿನ ಸದಸ್ಯರಲ್ಲದ ಅತಿಥಿಗಳು ಮತ್ತು ನವ ಅಹ್ಮದಿಗಳ ಹೃದಯದ ಮೇಲೆ ಉತ್ತಮ ಪ್ರಭಾವವನ್ನು ಸ್ಥಾಪಿಸಲಾಗುತ್ತದೆ ಮತ್ತು ಅವರು ಈ ಶುದ್ಧ ಪರಿಸರದಿಂದ ಹೆಚ್ಚು ಪ್ರಯೋಜನ ಪಡೆಯುತ್ತಾರೆ ಮತ್ತು ಇಸ್ಲಾಂ ಧರ್ಮದ ಸುಂದರ ಬೋಧನೆಯನ್ನು ಮೆಚ್ಚುತ್ತಾರೆ. ಮತ್ತು ಇದನ್ನು ಅನುಸರಿಸುವ ನವ ಅಹ್ಮದಿಯರು ಅವರು ಇನ್ನೂ ಉತ್ತಮ ರೀತಿಯಲ್ಲಿ ನಿಝಾಮ್‌ನಲ್ಲಿ ಲೀನವಾಗುತ್ತಾರೆ. ಅವರಿಗೆ ಕೆಲವು ಸ್ಥಳಗಳಲ್ಲಿ ಸೇರಿಸುವುದಿಲ್ಲ ಎಂದು ಅವರು ಆಕ್ಷೇಪಿಸುತ್ತಿರುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ)ರ ಒಂದು ಘಟನೆಯನ್ನು ನಿಮಗೆ ಹೇಳುತ್ತೇನೆ. ಮುಸ್ಲಿಮರ ಮತ್ತು ಕ್ರೈಸ್ತರ ನಡುವೆ ಜಂಗೇ ಮುಖದ್ದಸ್‌ನ ಹೆಸರಿನಲ್ಲಿ ಒಂದು ವಾದ ವಿವಾದ ನಡೆದಿತ್ತು. ಹಝ್ರತ್ ಮಸೀಹ್ ಮೌಊದ್(ಅ) ತಂಗಿದ್ದ ಸ್ಥಳದಲ್ಲಿ ಅತಿಥಿಗಳು ಹೆಚ್ಚಾಗಿ ಆಗಮಿಸಿದ ಕಾರಣದಿಂದ ವ್ಯವಸ್ಥಾಪಕರು ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಆಹಾರ ನೀಡಲು ಮರೆತು ಬಿಟ್ಟಿದ್ದರು. ತಡರಾತ್ರಿಯಾಯಿತು. ಬಹಳ ಹೊತ್ತು ಕಾದುನಿಂತ ನಂತರ ಹಝ್ರತ್ ಮಸೀಹ್ ಮೌಊದ್(ಅ) ಊಟದ ಬಗ್ಗೆ ಕೇಳಿದರು. ಆಗ ಎಲ್ಲ ವ್ಯವಸ್ಥಾಪಕರು ಬಹಳ ಚಿಂತಿತರಾದರು. ಅಷ್ಟರಲ್ಲಿ ಬಹಳ ತಡವಾಗಿ ಬಿಟ್ಟಿತ್ತು. ಊಟ ಬಾಕಿ ಉಳಿದಿರಲಿಲ್ಲ. ಮಾರುಕಟ್ಟೆ ಕೂಡ ಮುಚ್ಚಿ ಹೋಗಿತ್ತು. ಈ ಸ್ಥಿತಿಯ ಬಗ್ಗೆ ಹಝ್ರತ್ ಮಸೀಹ್ ಮೌಊದ್(ಅ)ರಿಗೆ ಗೊತ್ತಾದಾಗ ಅವರು ಹೇಳಿದರು: ಇಷ್ಟು ಗಾಬರಿಗೊಳ್ಳಬೇಕಾದ ಅಗತ್ಯವೇನು? ಊಟದ ಮೇಜಿನಲ್ಲಿ ಉಳಿದಿರುವ ಆಹಾರವನ್ನೇ ತನ್ನಿರಿ. ಅಲ್ಲಿ ನೋಡಿದಾಗ, ರೊಟ್ಟಿಯ ಕೆಲವು ತುಂಡುಗಳ ಹೊರತು ಬೇರೇನೂ ಇರಲಿಲ್ಲ. ಪಲ್ಯ, ಸಾರು ಇತ್ಯಾದಿಗಳು ಕೂಡ ಇರಲಿಲ್ಲ. ಹಝ್ರತ್ ಮಸೀಹ್ ಮೌಊದ್(ಅ) ನನಗೆ ಇದೇ ಸಾಕು ಎಂದು ಹೇಳಿ ಅದನ್ನೇ ತಿಂದರು.

(ಸೀರತ್ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್, ಹಝ್ರತ್ ಯಾಖೂಬ್ ಅಲೀ ಇರ್ಫಾನಿ(ರಹ್), ಭಾಗ–3, ಪುಟ–322)

ಹಝ್ರತ್ ಪೈಗಂಬರ್(ಸ)ರ ಅತ್ಯಂತ ದೊಡ್ಡ ಪ್ರೇಮಿ ಮತ್ತು ಹಝ್ರತ್ ಪೈಗಂಬರ್(ಸ)ರ ಚರ್ಯೆಯನ್ನು ಅನುಸರಿಸುವ ಹಝ್ರತ್ ಮಸೀಹ್ ಮೌಊದ್(ಅ)ರ ಮಾದರಿ ಇದಾಗಿದೆ. ಅವರ ಜಮಾಅತಿನಲ್ಲಿ ಸೇರಿದವರಾಗಿದ್ದೇವೆ ಎಂದು ವಾದಿಸುವ ನಾವು ಸಹ ಇಂತಹ ಸಹನೆ, ತಾಳ್ಮೆ, ಕೃತಜ್ಞತೆಯನ್ನು ಸದಾ ತೋರಿಸಬೇಕಾದ ಅಗತ್ಯವಿದೆ. ಈ ಮೂರು ದಿನಗಳಲ್ಲಿ ಅತಿಥಿ ಸತ್ಕಾರದ ಕೊರತೆಯಿದ್ದರೆ, ಅವರನ್ನು ಕ್ಷಮಿಸಿ ಮತ್ತು ವ್ಯವಸ್ಥಾಪಕರನ್ನು ಹೆಚ್ಚು ದೂರಬೇಡಿ.

ಆಡಳಿತದ ಪ್ರಯತ್ನವು ಗರಿಷ್ಠ ಸುಧಾರಣೆಯನ್ನು ಸೃಷ್ಟಿಸುವುದು ಆಗಿರುತ್ತದೆ, ಆದರೆ ಅತಿಥಿಗಳಿಂದ ಯಾವುದೇ ರೀತಿಯ ಅಸಮಾಧಾನ ಮತ್ತು ದೂರುಗಳು ಇರಬಾರದು.

ಸದ್ಭಾವನೆಯಿಂದ ಸುಧಾರಣೆಗೆ ಗಮನ ಕೊಡಲು ಬಯಸುವವರು ಮತ್ತು ಸಲಹೆಗಳನ್ನು ನೀಡಲು ಬಯಸುವವರು ತಮ್ಮ ಸಲಹೆಗಳನ್ನು ನಂತರ ಕಳುಹಿಸಬಹುದು ಇದರಿಂದ ಮುಂಬರುವ ವರ್ಷಗಳಲ್ಲಿ ಸುಧಾರಣೆಗಳನ್ನು ಮಾಡಬಹುದು ಮತ್ತು ಹೊಸಬರಿಗೂ ಹೆಚ್ಚಿನ ಸೌಲಭ್ಯಗಳನ್ನು ಒದಗಿಸಬಹುದು.

ಮತ್ತೊಂದು ಸಂಗತಿಯ ಕುರಿತು ಸಹ ನಿಮ್ಮೊಡನೆ ಹೇಳುತ್ತೇನೆ. ಈ ದಿನಗಳಲ್ಲಿ ಅನೇಕ ವಿಧದ ಎಕ್ಸಿಬಿಶನ್‌ಗಳು ಹಾಕಲಾಗಿವೆ. ಹಝ್ರತ್ ಮುಸ್ಲಿಹ್ ಮೌಊದ್(ರ)ರ ಯುರೋಪ್ ಭೇಟಿಗೆ ಈ ವರ್ಷ ನೂರು ವರ್ಷಗಳು ಪೂರ್ತಿಯಾಗಿವೆ. ಆದ್ದರಿಂದ ಯು.ಕೆ.ಯ ಜಮಾಅತ್ ಕೇಂದ್ರದ ಆರ್ಕೈವ್ಸ್‌ನೊಂದಿಗೆ ಸೇರಿಕೊಂಡು ವಿವಿಧ ಫೋಟೋಗಳ ಒಂದು ಪ್ರದರ್ಶನವನ್ನು ಏರ್ಪಡಿಸಿದೆ. ಅದನ್ನು ಅವಶ್ಯವಾಗಿ ನೋಡಿರಿ. ಹಝ್ರತ್ ಮುಸ್ಲಿಹ್ ಮೌಊದ್(ರ) ಅವರ ಬಗ್ಗೆ ಯುಕೆಯ ನೂರು ವರ್ಷಗಳ ಇತಿಹಾಸವಿದೆ. ಅದೇ ರೀತಿ ರಿವೀವ್ ಆಫ್ ರಿಲೀಜಿಯನ್ಸ್ ಅವರ ಎಕ್ಸಿಬಿಶನ್ ಇದೆ. ಆರ್ಕೈವ್ಸ್ ಹಾಗೂ ತಬ್ಲೀಗ್ ವಿಭಾಗದವರ ಎಕ್ಷಬಿಶನ್‌ಗಳಿವೆ. ಮಖ್ಝನೆ ತಸಾವೀರ್‌ನ ಎಕ್ಸಿಬಿಶನ್ ಇದೆ. ಅದೇ ರೀತಿಯಲ್ಲಿ ನೋಡಬೇಕಾದ ಬೇರೆ ಎಕ್ಸಿಬಿಶನ್‌ಗಳು ಸಹ ಇವೆ. ಬಿಡುವಿನ ವೇಳೆ ಸಮಯವನ್ನು ವ್ಯರ್ಥಗೊಳಿಸುವುದಕ್ಕೆ ಬದಲಾಗಿ ಈ ಪ್ರದರ್ಶನಗಳನ್ನು ನೋಡಲು ಪ್ರಯತ್ನಿಸಿರಿ.

ಅದೇ ರೀತಿ, ಈಗ ಪ್ರಪಂಚದ ಕೆಲವು ಸ್ಥಳಗಳಲ್ಲಿ ಕೊವಿಡ್‌ನ ರೋಗಿಗಳು ಹೆಚ್ಚಾಗುತ್ತಿದ್ದಾರೆ ಇಲ್ಲಿಯು ಕೆಲವೆಡೆ ರೋಗಿಗಳ ಸಂಖ್ಯೆ ಹೆಚ್ಚಾಗಿದೆ ಆದ್ದರಿಂದ ಇಲ್ಲಿಯು ಅನೇಕ ಜನರು ಬೇರೆ ಬೇರೆ ಪ್ರದೇಶಗಳಿಂದ ಆಗಿಸಿದ್ದಾರೆ ಕೋವಿಡ್‌ನ ಸೂಕ್ಷ್ಮಜೀವಿಗಳನ್ನು ತಂದಿರಬಹುದು. ಆದ್ದರಿಂದ, ಗೇಟ್‌ಗಳಲ್ಲಿ, ಪ್ರವೇಶದ್ವಾರಗಳಲ್ಲಿ ಹೋಮಿಯೋಪತಿ ಔಷಧವನ್ನು ನೀಡಲು ವ್ಯವಸ್ಥಾಪಕರಿಗೆ ಸೂಚನೆಗಳು ನೀಡಲಾಗಿದೆ. ಹಾಗಾಗಿ ಗೇಟ್‌ನಿಂದ ಪ್ರವೇಶಿಸುವ ಪ್ರತಿಯೊಬ್ಬ ವ್ಯಕ್ತಿಯು ಆ ಔಷಧಿಯನ್ನು ನೀಡಿದರೆ ಅದನ್ನು ತೆಗೆದುಕೊಳ್ಳಬೇಕು ಮತ್ತು ಅದನ್ನು ಸ್ವತಃ ಕೇಳಿ ಪಡೆಯಿರಿ. ಸರ್ವಶಕ್ತನಾದ ಅಲ್ಲಾಹನು ಪ್ರತಿಯೊಬ್ಬರನ್ನು ಪ್ರತಿಯೊಂದು ರೋಗಗಳಿಂದ ರಕ್ಷಿಸಲಿ. ಪ್ರತಿಯೊಂದು ಕೆಡಕಿನಿಂದ ಸುರಕ್ಷಿತವಾಗಿರಿಸಲಿ.

ಅದೇ ರೀತಿ ಈ ದಿನಗಳಲ್ಲಿ ಸೆಕ್ಯೂರಿಟಿಯ ಕಡೆಗೂ ವಿಶೇಷ ಗಮನ ನೀಡಿರಿ. ತಮ್ಮ ಎಡಬಲಗಳ ಕಡೆಗೆ ಗಮನ ನೀಡುವುದೇ ಅತ್ಯಂತ ಮಿಗಿಲಾದ ಸೆಕ್ಯೂರಿಟಿಯಾಗಿದೆ. ಹೀಗೆ ಮಾಡಿದರೆ ಯಾವುದೇ ಎದುರಾಳಿ, ಶತ್ರುಗಳಿಗೆ ಯಾವುದೇ ರೀತಿಯ ಕೆಡುಕು ಹರಡುವ ಅವಕಾಶ ಸಿಗುವುದಿಲ್ಲ.

ಅಂತೆಯೇ, ನೀವು ಯಾವುದೇ ಅನಗತ್ಯ ವಸ್ತುಗಳು, ಬ್ಯಾಗ್‌ಗಳು ಇತ್ಯಾದಿಗಳನ್ನು ಎಲ್ಲೋ ಬಿದ್ದಿರುವುದನ್ನು ಕಂಡರೆ, ತಕ್ಷಣ ಆಡಳಿತಕ್ಕೆ ತಿಳಿಸಿ ಮತ್ತು ಯಾವುದೇ ವ್ಯಕ್ತಿಯ ಯಾವುದೇ ಅನುಮಾನಾಸ್ಪದ ನಡವಳಿಕೆಯನ್ನು ನೀವು ನೋಡಿದರೆ ತಕ್ಷಣ ಆಡಳಿತಕ್ಕೆ ತಿಳಿಸಿ. ಈ ದಿನಗಳಲ್ಲಿ ವಿಶೇಷವಾಗಿ ಸೆಕ್ಯುರಿಟಿಯ ಕಡೆಗೆ ವಿಶೇಷ ಗಮನ ನೀಡಿ,ಆದರೆ ನಮ್ಮ ಬಳಿಯಲ್ಲಿರುವ ಅತ್ಯಂತ ಶ್ರೇಷ್ಠ ಆಯುಧ ಅಲ್ಲಾಹನ ಅಭಯವಾಗಿದೆ. ಈ ಅಭಯವನ್ನು ಗಳಿಸಲಿಕ್ಕಾಗಿ ವಿಶೇಷವಾಗಿ ಈ ಮೂರು ದಿನಗಳಲ್ಲಿ ಪ್ರಾರ್ಥನೆ ಮತ್ತು ದೇವಸ್ಮರಣೆಗೆ ಒತ್ತು ನೀಡಬೇಕು.

ಹಾಗೆ ಮಾಡಲು ಅಲ್ಲಾಹನು ನಿಮಗೆಲ್ಲರಿಗೂ ಸೌಭಾಗ್ಯ ನೀಡಲಿ ಮತ್ತು ಈ ಜಲ್ಸ ಎಲ್ಲರಿಗೂ ಅನುಗ್ರಹದಾಯಕವಾಗಲಿ.

--------------*****--------------

## ದಿವ್ಯದೂತರು (ಮಲಾಯಿಕ)

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ನುಡಿಯುತ್ತಾರೆ: "ಒಬ್ಬ ಮಹತ್ವಶಾಲಿ ವ್ಯಕ್ತಿ ದೇವನ ಪ್ರಾತಿನಿಧ್ಯದ ಉಡುಗೆಯಿಂದ ಭೂಷಿತರಾಗಿ (ದೇವನ ಖಲೀಫರಾಗಿ) ಮತ್ತು ದೇವವಾಣಿಯಿಂದ ಅನುಗ್ರಹೀತರಾಗಿ ಭೂಮಿಗೆ ಇಳಿಯುವಾಗ ದಿವ್ಯದೂತರ ಮತ್ತು ಪವಿತ್ರಾತ್ಮದ ಅವತರಣ ಅಥವಾ ಭೂಮಿಗೆ ಇಳಿಯುವಿಕೆ ಉಂಟಾಗುತ್ತದೆ.ಪವಿತ್ರಾತ್ಮ ವಿಶಿಷ್ಟವಾಗಿ ದೇವನ ಪ್ರತಿನಿಧಿಗೆ ಲಭಿಸುತ್ತದೆ."

***(ಫತ್‌ಹೆ ಇಸ್ಲಾಮ್; ರೂಹಾನೀ ಖಝಾಇನ್ ಸಂಪುಟ 3, ಪುಟ 12)***

# ಖುತ್‌ಬ ಜುಮುಅ

ಕಳೆದ ವಾರ ಜಲ್ಸ ಸಾಲಾನ ಯು.ಕೆ. ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ತೋರಿಸುತ್ತಾ ಮುಕ್ತಾಯಗೊಂಡಿತು. ಈ ಮೂರು ದಿನಗಳು ಅನುಗ್ರಹೀತ ದಿನಗಳಾಗಿದ್ದುವು. ಅದು ನಮ್ಮ ಮೇಲೂ ಅನ್ಯ ಜನರ ಮೇಲೂ ಒಂದು ಸಕಾರಾತ್ಮಕ ಪ್ರಭಾವ ಬೀರಿತು.

ಮೊದಲು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಅವರು ಜಲ್ಸಕ್ಕೆ ಮೊದಲು, ಜಲ್ಸ ಜರಗುವಾಗ ಮತ್ತು ಜಲ್ಸದ ನಂತರ ಸಹ ಅದರ ಏರ್ಪಾಡುಗಳನ್ನು ಮಾಡಲು ಮತ್ತು ಅದನ್ನು ಮುಕ್ತಾಯಗೊಳಿಸಲು ತಮ್ಮ ಪಾತ್ರವನ್ನು ವಹಿಸಿದರು ಮತ್ತು ಈಗಲೂ ವಹಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಮಹಿಳೆಯರು, ಪುರುಷರು ಮತ್ತು ಮಕ್ಕಳಲ್ಲಿ ಎಂತಹ ಗುಣವಿದೆ ಎಂದರೆ ಅದನ್ನು ಅನ್ಯರು ಕೂಡ ಹೊಗಳುತ್ತಾರೆ. ಇದು ಸ್ವಯಂ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಮಾಡುವ ಮೌನವಾದ ತಬ್ಲೀಗ್ ಆಗಿರುತ್ತದೆ.

ಜಲ್ಸದ ಕಾರ್ಯಕ್ರಮಗಳು ಅತ್ಯುತ್ತಮವಾಗಿ ತಲುಪಿತು ಎಂದು ಹೇಳಿ ಲೋಕದ ವಿವಿಧ ದೇಶಗಳಲ್ಲಿ ಕುಳಿತುಕೊಂಡಿರುವ ಜನರು ಸಹ ಧನ್ಯವಾದಗಳನ್ನು ಅರ್ಪಿಸುತ್ತಿದ್ದಾರೆ. ನಾನು ಸಹ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವರ್ಷ ಬ್ರಿಟನಿನ ಕಾರ್ಯಕರ್ತರಲ್ಲದೇ ಮೊರಿಶಿಯಸ್‌ನಿಂದಲೂ ಮೊದಲ ಬಾರಿ ದೊಡ್ಡ ಸಂಖ್ಯೆಯಲ್ಲಿ ಖುದ್ದಾಮ್ ಮತ್ತು ಕಾರ್ಯಕರ್ತರು ಬಂದರು ಮತ್ತು ಬಹಳ ಉತ್ತಮವಾಗಿ ಕೆಲಸ ಮಾಡಿದರು. ಕೆನಡದಿಂದ ಖುದ್ದಾಮ್ ಬಂದಿರುವರು. ಅವರು ಮುಕ್ತಾಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

ಇದು ಸತ್ಯ ಜಮಾಅತ್ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜಮಾಅತ್ ಆಗಿದೆ ಎಂಬ ನನ್ನ ನಂಬಿಕೆ ಈ ಜಲ್ಸದಲ್ಲಿ ಭಾಗವಹಿಸಿ ದೃಢವಿಶ್ವಾಸವಾಗಿ ಮಾರ್ಪಾಡಾಗಿದೆ. ನಾವು ನಮ್ಮ ಪೈಗಂಬರ್(ಸ)ರ ಕರೆಗೆ ಓಗೊಟ್ಟು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬದಿದ್ದರೆ ನಾವು ದಾರಿ ತಪ್ಪಿ ಹೋಗುವೆವು. (ಇಸ್ಮಾಈಲ್ ಬೇಲಿನ್, ಫ್ರೆಂಚ್ ಗಿಯಾನಾ)

ಜಗತ್ತಿನ ನೂರಕ್ಕೂ ಹೆಚ್ಚು ದೇಶಗಳ ಜನರು ಒಂದೆಡೆ ಸೇರಿದರೆ ಅನೇಕ ವಿಷಯಗಳು ವಿಭಿನ್ನವಾಗಿ ಕಾಣುತ್ತವೆ, ಹಲವು ಸಮಸ್ಯೆಗಳು ಉದ್ಭವಿಸಬಹುದು, ಆದರೆ ಇಲ್ಲಿ ಪ್ರತಿಯೊಬ್ಬರ ನೈತಿಕತೆ ಮತ್ತು ವರ್ತನೆಗಳು ಒಂದೇ ಆಗಿದ್ದವು. (ಯೂಶೀದ್ ಸಾಹಿಬ್, ಜಾಪಾನ್)

ಖಲೀಫರ ಭಾಷಣಗಳನ್ನು ಆಲಿಸಿ ನನ್ನೊಳಗೆ ಆಧ್ಯಾತ್ಮಿಕ ಬದಲಾವಣೆಯನ್ನು ಕಾಣುತ್ತಿದ್ದೇನೆ ಮತ್ತು ಆ ಭಾವನೆಗಳೊಂದಿಗೆ ನಾನು ಹಿಂದಿರುಗುತ್ತಿದ್ದೇನೆ. ಇಲ್ಲಿ ನಮಾಝ್ ನಿರ್ವಹಿಸುವುದರಿಂದ ನನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆ. (ಅಝೀಝ್ ನಝೀರ್ ಸಾಹಿಬ್ ಕೊಸೋವೊ)

ನಾನು ನಿಮ್ಮ ಜಮಾಅತ್ತಿನ ಸದಸ್ಯರಿಗೆ ವಾಗ್ದಾನ ನೀಡುತ್ತೇನೆ: ನಾನು ನನ್ನ ಸಂಪೂರ್ಣ ಪಾತ್ರವನ್ನು ನಿರ್ವಹಿಸುತ್ತೇನೆ ಮತ್ತು ನನ್ನ ಪ್ರಭಾವದಲ್ಲಿರುವ ಜನರಿಗೆ ನನ್ನ ವೈಯಕ್ತಿಕ ಅನುಭವಗಳನ್ನು ತೋರಿಸುತ್ತೇನೆ, ಅಹ್ಮದಿಯರು ಕೇವಲ ಮುಸ್ಲಿಮರಲ್ಲ ಬದಲಿಗೆ ಅವರು ಅತ್ಯುತ್ತಮ ಮತ್ತು ಆದರ್ಶ ಮುಸ್ಲಿಮರಾಗಿದ್ದಾರೆ.

ಜಮಾಅತ್ ಮಾಡುತ್ತಿರುವಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಮಾನವೀಯತೆಯ ಬಗ್ಗೆ ಹೆಚ್ಚಿನ ಅರಿವು, ಜಾಗೃತಿ ಮತ್ತು ಸಹಾನುಭೂತಿ ಮೂಡಿಸಿದರೆ, ಖಂಡಿತವಾಗಿಯೂ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಬಹುದು. (ಮಿಸಸ್ ಪೆಟ್ರೋಷಿ, ಹಾಲೆಂಡ್)

**ಜಲ್ಸ ಸಾಲಾನ ಬ್ರಿಟನ್‌ನ ಸಂದರ್ಭದಲ್ಲಿ ನಿಸ್ವಾರ್ಥರಾಗಿ ಸೇವೆಸಲ್ಲಿಸಿದ ಕಾರ್ಯಕರ್ತರರಿಗೆ ಧನ್ಯವಾದಗಳನ್ನು ಅರ್ಪಿಸುವ ಪ್ರಸ್ತಾವನೆ ಹಾಗೂ ಜಲ್ಸದಲ್ಲಿ ಭಾಗವಹಿಸಿದ ಕೆಲವು ಗಣ್ಯ ವ್ಯಕ್ತಿಗಳ ಅನಿಸಿಕೆಗಳ ಪ್ರಸ್ತಾವನೆ**

ಅನಿಸಿಕೆಗಳನ್ನು ಹೇಳುವವರ ಹೃದಯಗಳನ್ನು ಅಲ್ಲಾಹನು ತೆರೆಯಲಿ ಮತ್ತು ಅವರು ಅಹ್ಮದಿಯ್ಯತಿನ ಸಂದೇಶದ ಯಥಾರ್ಥ ಅರ್ಥವನ್ನು ಮನವರಿಕೆ ಮಾಡುವವರಾಗಲಿ. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನದ ಉದ್ದೇಶವನ್ನು ನಾವು ಗಳಿಸುವವರಾಗಲಿ. ಅನಂತರ ಈ ಮೂರು ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಅವುಗಳನ್ನು ತಮ್ಮ ಜೀವಿತಗಳ ಭಾಗವನ್ನಾಗಿ ನಾವು ಮಾಡುವವರಾಗಲಿ.

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಇಸ್ಲಾಮಾಬಾದ್ (ಯು.ಕೆ) ಯ **'ಮಸ್ಜಿದ್ ಮುಬಾರಕ್'** ನಿಂದ **02–08–2024** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ - بِسْمِ اللّٰهِ الرَّحْمٰنِ الرَّحِيْمِ

اَلْحَمْدُ لِلّٰهِ رَبِّ الْعٰلَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

إِيَّاكَ نَعْبُدُ وَإِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಅಲ್‌ಹಮ್ದುಲಿಲ್ಲಾಹ್, ಕಳೆದ ವಾರ ಜಲ್ಸ ಸಾಲಾನ ಯು.ಕೆ. ಅಲ್ಲಾಹನ ಅನುಗ್ರಹಗಳ ದೃಶ್ಯಗಳನ್ನು ತೋರಿಸುತ್ತಾ ಮುಕ್ತಾಯಗೊಂಡಿತು. ಈ ಮೂರು ದಿನಗಳು ಅನುಗ್ರಹೀತ ದಿನಗಳಾಗಿದ್ದುವು. ಅದು ನಮ್ಮ ಮೇಲೂ ಅನ್ಯ ಜನರ ಮೇಲೂ ಒಂದು ಸಕಾರಾತ್ಮಕ ಪ್ರಭಾವ ಬೀರಿತು. ನಾನು ಅನ್ಯರ ಕೆಲವು ಅನಿಸಿಕೆಗಳನ್ನು ಪ್ರಸ್ತಾಪಿಸುತ್ತೇನೆ. ಆದರೆ ಅದಕ್ಕಿಂತ ಮೊದಲು ಕಾರ್ಯಕರ್ತರಿಗೆ ಧನ್ಯವಾದಗಳನ್ನು ಅರ್ಪಿಸಲು ಬಯಸುತ್ತೇನೆ. ಅವರು ಜಲ್ಸಕ್ಕೆ ಮೊದಲು, ಜಲ್ಸ ಜರಗುವಾಗ ಮತ್ತು ಜಲ್ಸದ ನಂತರ ಸಹ ಅದರ ಏರ್ಪಾಡುಗಳನ್ನು ಮಾಡಲು ಮತ್ತು ಅದನ್ನು ಮುಕ್ತಾಯಗೊಳಿಸಲು ತಮ್ಮ ಪಾತ್ರವನ್ನು ವಹಿಸಿದರು ಮತ್ತು ಈಗಲೂ ವಹಿಸುತ್ತಿದ್ದಾರೆ. ಅಲ್ಲಾಹನ ಅನುಗ್ರಹದಿಂದ ಜಮಾಅತಿನ ಮಹಿಳೆಯರು, ಪುರುಷರು ಮತ್ತು ಮಕ್ಕಳಲ್ಲಿ ಎಂತಹ ಗುಣವಿದೆ ಎಂದರೆ ಅದನ್ನು

ಅನ್ಯರು ಕೂಡ ಹೊಗಳುತ್ತಾರೆ. ಇದು ಸ್ವಯಂ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಮಾಡುವ ಮೌನವಾದ ತಬ್ಲೀಗ್ ಆಗಿರುತ್ತದೆ. ಇದರಲ್ಲಿ ಜಲ್ಸದ ಎಲ್ಲ ವಿಭಾಗಗಳ ಕಾರ್ಯಕರ್ತರ ಮುಖ್ಯವಾದ ಪಾಲು ಇದೆ. ಅದು ಪ್ರವೇಶ ಮಾರ್ಗಗಳಲ್ಲಾಗಲೀ, ಗೇಟ್, ಚೆಕಿಂಗ್, ಪಾರ್ಕಿಂಗ್, ಊಟ ಬಡಿಸುವುದಾಗಿರಲೀ, ಅಡುಗೆ ಮಾಡುವುದಾಗಿರಲೀ ಅಥವಾ ಶುಚಿತ್ವವಾಗಿರಲೀ. ಮಕ್ಕಳು ಕುಡಿಯುವ ನೀರು ಸರಬರಾಜು ಮಾಡುವ ಅಥವಾ ಇತರ ಜಾಗಗಳಲ್ಲಾಗಲೀ ಕಾರ್ಯಕರ್ತರು ಅಚ್ಚುಕಟ್ಟಾಗಿ ಡ್ಯೂಟಿಗಳನ್ನು ನೀಡುತ್ತಿದ್ದರು. ಎಲ್ಲ ರೀತಿಯಲ್ಲೂ ಪ್ರತಿಯೊಂದು ವಿಭಾಗ ಬಹಳ ಸಕ್ರಿಯವಾಗಿತ್ತು ಮತ್ತು ಧನ್ಯವಾದಕ್ಕೆ ಅರ್ಹವಾಗಿದೆ. ಕೆಲವರು ಗಮನಿಸಬಹುದಾದ ಸಣ್ಣ ದೌರ್ಬಲ್ಯಗಳಿವೆ, ಆದರೆ ಅಂತಹ ದೊಡ್ಡ ವ್ಯವಸ್ಥೆಯಲ್ಲಿ ಅಂತಹ ದೌರ್ಬಲ್ಯಗಳನ್ನು ನಿರ್ಲಕ್ಷಿಸಬೇಕು. ಆದಾಗ್ಯೂ, ಇದು ಸ್ವಯಂ ಸೇವಕರು ತಮ್ಮ ಕರ್ತವ್ಯಗಳನ್ನು ನಿರ್ವಹಿಸುತ್ತಾ ಮಾಡುವ ಮೌನವಾದ ತಬ್ಲೀಗ್ ಆಗಿರುತ್ತದೆ ಮತ್ತು ಅನೇಕ ಜನರು ಈ ಕುರಿತು ಕಾರ್ಯಕರ್ತರ ಪರವಾಗಿ ಪ್ರಶಂಸನೀಯ ಮಾತುಗಳನ್ನು ಹೇಳುತ್ತಾರೆ, ಬರೆದು ಕಳುಹಿಸುತ್ತಾರೆ ಮತ್ತು ತಮ್ಮ ಅನಿಸಿಕೆಗಳನ್ನು ಕೂಡ ಬಿಟ್ಟು ಹೋಗುತ್ತಾರೆ. ಎಂ.ಟಿ.ಎ. ಮೂಲಕ ನಮಗೆ ಜಲ್ಸದ ಕಾರ್ಯಕ್ರಮಗಳು ಅತ್ಯುತ್ತಮವಾಗಿ ತಲುಪಿತು ಎಂದು ಹೇಳಿ ಲೋಕದ ವಿವಿಧ ದೇಶಗಳಲ್ಲಿ ಕುಳಿತುಕೊಂಡಿರುವ ಜನರು ಸಹ ಧನ್ಯವಾದಗಳನ್ನು ಅರ್ಪಿಸುತ್ತಿದ್ದಾರೆ. ನಾನು ಸಹ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಈ ವರ್ಷ ಬ್ರಿಟನಿನ ಕಾರ್ಯಕರ್ತರಲ್ಲದೇ ಮೊರಿಶಿಯಸ್‌ನಿಂದಲೂ ಮೊದಲ ಬಾರಿ ದೊಡ್ಡ ಸಂಖ್ಯೆಯಲ್ಲಿ ಖುದ್ದಾಮ್ ಮತ್ತು ಕಾರ್ಯಕರ್ತರು ಬಂದರು ಮತ್ತು ಬಹಳ ಉತ್ತಮವಾಗಿ ಕೆಲಸ ಮಾಡಿದರು. ಕೆನಡದಿಂದ ಖುದ್ದಾಮ್ ಬಂದಿರುವರು. ಅವರು ಮುಕ್ಯಾಯ ಕೆಲಸದಲ್ಲಿ ಸಹಾಯ ಮಾಡುತ್ತಿದ್ದಾರೆ. ಅಲ್ಲಾಹನು ಅವರೆಲ್ಲರಿಗೂ ಪ್ರತಿಫಲ ನೀಡಲಿ.

ಈ ವರ್ಷ ಪ್ರೆಸ್ ಮತ್ತು ಮೀಡಿಯಾ ಪ್ರಸಾರ ಸಹ ಸಾಕಷ್ಟು ಆಗಿತ್ತು. ಟ್ರಾಫಿಕಿನ ವ್ಯವಸ್ಥೆ ಬಹಳ ಉತ್ತಮವಾಗಿತ್ತು. ನೆರೆಕರೆಯವರು ಕೂಡ ಸಂತೋಷದಿಂದ ಇದ್ದರು. ಕಳೆದ ವರ್ಷಕ್ಕಿಂತ ಈ ವರ್ಷ ಹಾಜರಿ ಕಡಿಮೆಯಿರುವ ಕಾರಣದಿಂದ ಇಷ್ಟು ಆರಾಮವಾಗಿ ಟ್ರಾಫಿಕ್ ಹೋಗುತ್ತಿತ್ತು ಎಂದು ಅವರು ಭಾವಿಸಿದ್ದರು. ಆದರೆ ಹಾಜರಿ ಕಳೆದ ವರ್ಷಕ್ಕಿಂತ ಎರಡು ಸಾವಿರದಷ್ಟು ಹೆಚ್ಚಾಗಿತ್ತು. ಇದನ್ನು ಅವರೊಡನೆ ಹೇಳಲಾದಾಗ ಅವರು ಆಶ್ಚರ್ಯಗೊಂಡರು. ಬಹಳ ಉತ್ತಮ ವ್ಯವಸ್ಥೆಯಾಗಿತ್ತು – ಮಾಶಾ ಅಲ್ಲಾಹ್. ಈ ಪ್ರದೇಶದ ಕೌನ್ಸಿಲರ್ ಅಹ್ಮದೀ ಮುಬಲ್ಲಿಗ್ ಆಗಿರುವರು. ಅವರು ಎಲ್ಲ ನೆರೆಕರೆಯವರೊಂದಿಗೆ ಉತ್ತಮ ಸಂಬಂಧ ಇರಿಸಿಕೊಂಡಿದ್ದರು ಮತ್ತು ಟ್ರಾಫಿಕ್ ಯೋಜನೆಯಲ್ಲಿ ಬಹಳ ಉತ್ತಮ ಪಾತ್ರವನ್ನು ವಹಿಸಿಕೊಂಡಿದ್ದರು. ಅಲ್ಲಾಹನು ಅವರಿಗೂ ಪ್ರತಿಫಲ ನೀಡಲಿ.

ಅನಿಸಿಕೆಗಳನ್ನು ಹೇಳುವವರ ಹೃದಯಗಳನ್ನು ಅಲ್ಲಾಹನು ತೆರೆಯಲಿ ಮತ್ತು ಅವರು ಅಹ್ಮದಿಯ್ಯತ್ತಿನ ಸಂದೇಶದ ಯಥಾರ್ಥ ಅರ್ಥವನ್ನು ಮನವರಿಕೆ ಮಾಡುವವರಾಗಲಿ. ಅದೇ ರೀತಿಯಲ್ಲಿ ಹಝ್ರತ್ ಮಸೀಹ್ ಮೌಊದ್(ಅ)ರ ಆಗಮನದ ಉದ್ದೇಶವನ್ನು ನಾವು ಗಳಿಸುವವರಾಗಲಿ. ಅನಂತರ ಈ ಮೂರು ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಅವುಗಳನ್ನು ತಮ್ಮ ಜೀವಿತಗಳ ಭಾಗವನ್ನಾಗಿ ನಾವು ಮಾಡುವವರಾಗಲಿ.

ಫ್ರೆಂಚ್ ಗಿಯಾನಾದಿಂದ ಇಸ್ಮಾಯೀಲ್ ಸಾಹಿಬ್ ಜಲ್ಸದಲ್ಲಿ ಭಾಗವಹಿಸಿದ್ದರು. ಅವರು ಜಮಾಅತ್‌ನೊಂದಿಗೆ ಮುಂಚೆಯಿಂದಲೂ ಸಂಬಂಧವಿತ್ತು ಆದರೆ ಬೈಅತ್ ಮಾಡಿರಲಿಲ್ಲ. ಜಲ್ಸದ ವೇಳೆ ಅವರಿಗೆ ಬೈಅತ್ ಮಾಡುವ ಸೌಭಾಗ್ಯ ಸಹ ಲಭಿಸಿತು. ಅವರು ಹೇಳುತ್ತಾರೆ: ಲೋಕದ ಎಲ್ಲ ಮುಖ್ಯ ಭಾಷೆಗಳು ಮತ್ತು ವರ್ಗಗಳು ಒಟ್ಟುಗೂಡುವ ಇಂತಹ ಕಾರ್ಯಕ್ರಮವನ್ನು ನಾನು ನನ್ನ ಜೀವಿತದಲ್ಲಿ ಎಂದೂ ನೋಡಿಲ್ಲ. ಇದು ಸತ್ಯ ಜಮಾಅತ್ ಮತ್ತು ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಜಮಾಅತ್ ಆಗಿದೆ ಎಂಬ ನನ್ನ ನಂಬಿಕೆ ಈ ಜಲ್ಸದಲ್ಲಿ ಭಾಗವಹಿಸಿ ದೃಢವಿಶ್ವಾಸವಾಗಿ ಮಾರ್ಪಾಡಾಗಿದೆ. ನಾವು ನಮ್ಮ ಪೈಗಂಬರ್(ಸ)ರ ಕರೆಗೆ ಓಗೊಟ್ಟು ಹಝ್ರತ್ ಮಸೀಹ್ ಮೌಊದ್(ಅ)ರನ್ನು ನಂಬದಿದ್ದರೆ ನಾವು ದಾರಿ ತಪ್ಪಿ ಹೋಗುವೆವು. ಮುಂದೆ ಅವರು ಹೇಳುತ್ತಾರೆ: ಸರ್ವಶಕ್ತನಾದ ಅಲ್ಲಾಹನು ಈ ವಿನೀತನಿಗೆ ಮಾರ್ಗದರ್ಶನ ನೀಡಿದ್ದಾನೆ ಎಂದು ನನಗೆ ಖಾತ್ರಿಯಿದೆ ಮತ್ತು ಇಂದು ಮುಸ್ಲಿಮರು ಒಗ್ಗಟ್ಟಾಗಿರಬೇಕಾದರೆ ಅವರು ಅಹ್ಮದಿಯಾ ಜಮಾತ್‌ಗೆ ಸೇರ್ಪಡೆಯಾಗಬೇಕು ಮತ್ತು ಈ ಅನುಗ್ರಹದಾಯಕ ಜಮಾತ್‌ನಲ್ಲಿ ಖಲೀಫತ್‌ನೊಂದಿಗೆ ನಿಷ್ಠೆ ವ್ಯಕ್ತಪಡಿಸಬೇಕು. ಮತ್ತೆ ಅವರು ಹೇಳುತ್ತಾರೆ ಜಲ್ಸ ಸಾಲಾನದ ವ್ಯವಸ್ಥೆಯೂ ಅಪೂರ್ಣವಾಗಿತ್ತು. ಪ್ರತಿಯೊಬ್ಬ ಕಾರ್ಯಕರ್ತರು ಯಾವಾಗಲೂ ಮುಗುಳುನಗುತ್ತಿರುವಂತೆ ತೋರುತ್ತಿದ್ದರು ಮತ್ತು ಅವರ ಮುಖದಲ್ಲಿ ಯಾವುದೇ ಬೂಟಾಟಿಕೆ ಇರಲಿಲ್ಲ. ಪ್ರತಿಯೊಬ್ಬ ಕಾರ್ಯಕರ್ತನೂ ತುಂಬ ಸಂತೋಷದಿಂದ ಅತಿಥಿಗಳಿಗೆ ಸೇವೆ ನೀಡುತ್ತಿದ್ದರು. ನನಗೆ ಇಲ್ಲಿ ಯಾರ ಪರಿಚಯವೂ ಇರಲಿಲ್ಲ ಆದರೆ ಎಲ್ಲರೂ ಒಬ್ಬರಿಗೊಬ್ಬರು ವರ್ಷಗಟ್ಟಲೆಯಿಂದಲೂ ಪರಿಚಿತರಿರಬಹುದು ಎಂಬಂತೆ ಬಂದು ಸೇರುತ್ತಿದ್ದರು. ಜಲ್ಸಕ್ಕಿಂತ ಮುಂಚೆಯೇ, ನಾನು ಅನೇಕ ವರ್ಷಗಳಿಂದ ಮುಸ್ಲಿಮನಾಗಿದ್ದೆ, ನಾನು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ್ದೆ ಮತ್ತು ಇಸ್ಲಾಮಿನ ನಿಯಮಗಳನ್ನು ಅನುಸರಿಸಲು ಪ್ರಯತ್ನಿಸುತ್ತಿದ್ದೆ, ಆದರೆ ನನಗೆ ಯಾವಾಗಲೂ ಏನಾದರೂ ಕಣ್ಮರೆಯಾಗಿದೆ ಎಂದು ಭಾವಿಸುತ್ತಿದ್ದೆ, ಆದರೆ ಈ ಜಲ್ಸದಲ್ಲಿ ಸೇರಿದ ನಂತರ, ನನ್ನ ಆ ಕಣ್ಮರೆಯಾದ ವಸ್ತು ನನಗೆ ಲಭಿಸಿದೆ ಎಂದು ನಾನು ಭಾವಿಸಿದೆ.

ಜಪಾನಿನಿಂದ ಬಂದ ಬುದ್ಧ ಧರ್ಮದ ಚೀಫ್ ಪ್ರೀಸ್ಟ್ ಹೇಳುತ್ತಾರೆ: “ನಾವು ಜಲ್ಸಾದ ಎಲ್ಲಾ ಅಧಿವೇಶನಗಳಲ್ಲಿ ಭಾಗವಹಿಸಿದ್ದೇವೆ. ನನ್ನ ಪತ್ನಿ ಕೂಡ ಮಹಿಳೆಯರ ಮಾರ್ಕ್ಯೂಗೆ ಹೋಗಿದ್ದಳು. ನಾವು ಪ್ರದರ್ಶನಗಳನ್ನು ಸಹ ಭೇಟಿ ಮಾಡಿ ಸ್ವಲ್ಪ ಸಮಯ ಬಜಾರ್‌ಗೆ ಹೋದೆವು. ಸೇವೆ ಸಲ್ಲಿಸಿದ ಸ್ವಯಂಸೇವಕರು ಶ್ರದ್ಧೆ ಮತ್ತು ಎಚ್ಚರದಿಂದ ಕಾಣುತ್ತಿರುವುದು ಎಲ್ಲೆಡೆ ಆದರ್ಶಪ್ರಾಯವಾಗಿತ್ತು. ಮೊದಲ ದಿನದಿಂದ ಕೊನೆಯ ದಿನದ ಕೊನೆಯ ಕ್ಷಣದ ವರೆಗೆ ಕಾರ್ಯಕರ್ತರ ಆವೇಶ ಮತ್ತು ಉತ್ಸಾಹ ಸ್ಥಾಯಿಯಾಗಿ ನೆಲೆನಿಂತಿತ್ತು. ಜಲ್ಸದಲ್ಲಿ ಸೇರಿದ್ದ ಅಹ್ಮದಿ ಗೆಳೆಯರು ಕೂಡ ತುಂಬಾ ಆತಿಥ್ಯ ಮತ್ತು ಸ್ನೇಹಪರರಾಗಿದ್ದರು. ಜಗತ್ತಿನ ನೂರಕ್ಕೂ ಹೆಚ್ಚು ದೇಶಗಳ ಜನರು ಒಂದೆಡೆ ಸೇರಿದರೆ ಅನೇಕ ವಿಷಯಗಳು ವಿಭಿನ್ನವಾಗಿ ಕಾಣುತ್ತವೆ, ಹಲವು ಸಮಸ್ಯೆಗಳು ಉದ್ಭವಿಸಬಹುದು, ಆದರೆ ಇಲ್ಲಿ ಪ್ರತಿಯೊಬ್ಬರ ನೈತಿಕತೆ ಮತ್ತು ವರ್ತನೆಗಳು ಒಂದೇ ಆಗಿದ್ದವು. ಯಾರನ್ನಾದರೂ ಎಲ್ಲಿ ತಡೆದರೂ ಅವರು ಅಲ್ಲಿಯೇ ನಿಲ್ಲುತ್ತಿದ್ದರು ಮತ್ತು ನಮಾಝ್‌ಗಾಗಿ ಜಲ್ಸಗಾಗಿ ಕರೆದರೂ ತಡಮಾಡದೆ ಅವರು ಅಲ್ಲಿಗೆ ತಲುಪುತ್ತಿದ್ದರು. ಈ ಜಲ್ಸಾದ ದೃಶ್ಯ ನಮ್ಮ ಪಾಲಿಗೆ ಅವಿಸ್ಮರಣೀಯ ಎನ್ನುತ್ತಾರೆ. ಈ ಚೀಫರು ನನ್ನನ್ನು ಸಹ ಭೇಟಿಯಾಗಿದ್ದರು. ನಾನು ಅವರೊಡನೆ ಹೀಗೆ ಹೇಳಿದೆ: ದೇವನೊಬ್ಬನೇ ಎಂದು ನಂಬುವುದು ಅವಶ್ಯಕ. ಇದರ ಬಗ್ಗೆ ಆಲೋಚನೆ ಮಾಡಿರಿ. ಅದಕ್ಕೆ ಅವರು ಹೀಗೆ ಪ್ರತಿಕ್ರಿಯಿಸಿದರು: ನಾನು ಬುದ್ಧ ಧರ್ಮಾವಲಂಬಿ ಆಗಿರುವ ಕಾರಣದಿಂದ ಸಾಂಪ್ರದಾಯಿಕವಾಗಿ ನನಗೆ ದೇವವಿಶ್ವಾಸವಿಲ್ಲ. ಆದರೆ ಈ ಪ್ರಪಂಚಕ್ಕೆ ಒಬ್ಬ ಸೃಷ್ಟಿಕರ್ತ, ಮಾಲಿಕ ಇದೆ ಎಂದು ನನ್ನ ಹೃದಯ ಹೇಳುತ್ತದೆ. ನಾವು ಅವನ ಸೃಷ್ಟಿಗಳಾಗಿದ್ದೇವೆ. ನಾವು ಆ ಸೃಷ್ಟಿಕರ್ತ ಮತ್ತು ಯಜಮಾನನಾದ ಪ್ರಭುವಿನ ಸಾಮಿಪ್ಯವನ್ನು ಗಳಿಸಬಹುದು ಎಂದು ಹೇಳಿದರು. ಹೇಗಿದ್ದರೂ ಅಲ್ಪಸ್ವಲ್ಪವಾಗಿಯಾದರೂ ಅವರಲ್ಲಿ ಅಲ್ಲಾಹನ ಕಡೆಗೆ ಹೆಜ್ಜೆ ಹಾಕುವ ಯೋಚನೆ ಉಂಟಾಗಿದೆ.

ಕೊಸೋವೋದಿಂದ ಓರ್ವ ಅತಿಥಿ ಅಖೀರುಝ್ ನಝೀರಿ ಸಾಹಿಬ್ ಆಗಮಿಸಿದ್ದರು. ಅವರು ಹೇಳುತ್ತಾರೆ: ನನಗೆ ಪ್ರಥಮ ಬಾರಿಗೆ ಜಲ್ಸದಲ್ಲಿ ಭಾಗವಹಿಸುವ ಅವಕಾಶ ಲಭಿಸಿದೆ. ಬಹಳ ಸಂತೋಷವಾಗಿದೆ. ಎಲ್ಲವೂ ಸುಸೂತ್ರವಾಗಿ ನಡೆಯುತ್ತಿತ್ತು. ವಿಶೇಷವಾಗಿ ಭಾಷಣಗಳು ಬಹಳ ಪ್ರಯೋಜನಕಾರಿಯಾಗಿದ್ದವು. ಖಲೀಫರ ಭಾಷಣಗಳನ್ನು ಆಲಿಸಿ ನನ್ನೊಳಗೆ ಆಧ್ಯಾತ್ಮಿಕ ಬದಲಾವಣೆಯನ್ನು ಕಾಣುತ್ತಿದ್ದೇನೆ ಮತ್ತು ಆ ಭಾವನೆಗಳೊಂದಿಗೆ ನಾನು ಹಿಂದಿರುಗುತ್ತಿದ್ದೇನೆ. ಇಲ್ಲಿ ನಮಾಝ್ ನಿರ್ವಹಿಸುವುದರಿಂದ ನನ್ನ ಮನಸ್ಸಿನಲ್ಲಿ ಶಾಂತಿ ನೆಲೆಸಿದೆ. ಅವರು ಹೇಳುತ್ತಾರೆ: ನನಗೆ ವಯಸ್ಸಾಗಿದೆ. ಮುಂದಿನ ವರ್ಷ ಮತ್ತೆ ಈ ಆಧ್ಯಾತ್ಮಿಕ ವಾತಾವರಣಕ್ಕೆ ಸೇರುವ ಅವಕಾಶ ಸಿಗಲಿ ಎಂದು ಪ್ರಾರ್ಥಿಸುತ್ತೇನೆ. ಈ ಪರಿಸರವು ನನ್ನಲ್ಲಿ ಇಸ್ಲಾಂ ಮತ್ತು ಅಹ್ಮದಿಯ್ಯತ್ತಿನ ಪ್ರೀತಿಯನ್ನು ತುಂಬಿದೆ. ನಾನು ಎಲ್ಲಿಗೆ ಹೋದರೂ ಅದನ್ನು ಖಂಡಿತವಾಗಿ ಪ್ರಸ್ತಾಪಿಸುತ್ತೇನೆ. ಅಹ್ಮದಿಯ್ಯತ್‌ನ ನಿಜವಾದ ಬೋಧನೆಗಳನ್ನು ಓದಲು ನಾನು ಜನರ ಗಮನವನ್ನು ಸೆಳೆಯುತ್ತೇನೆ. ಖಲೀಫರ ಸಮಾರೋಪ ಭಾಷಣ ಅದು ಪುರಾವೆಗಳಿಂದ ತುಂಬಿತ್ತು ಅದರ ಬಗ್ಗೆ ನಾನು ಖಂಡಿತವಾಗಿ ಹೇಳುತ್ತೇನೆ, ಏಕೆಂದರೆ ನಾನೇ ಸ್ವತಃ ಅದಕ್ಕೆ ಸಾಕ್ಷಿಯಾಗಿದ್ದೇನೆ. ಬೈಅತ್ ಮಾಡುವ ಮೊದಲು, ಬರ್ಷತಿನಾ ಎಂಬ ಪಟ್ಟಣದಲ್ಲಿ ಜಮಾಅತ್‌ನ ಮಿಷನ್ ಹೌಸ್ ಇದೆ. ಅದರ ಹತ್ತಿರ ಒಂದು ಅಂಗಡಿ ಇತ್ತು. ನಾನು ಆ ಅಂಗಡಿಗೆ ಹೋದಾಗಲೆಲ್ಲ ಮುಸಲ್ಮಾನನಾದ ಅಂಗಡಿಯ ಮಾಲಿಕನಿಗೆ ನಾನು ನಮಾಝ್ ನಿರ್ವಹಿಸಲು ಮಿಷನ್ ಹೌಸ್‌ಗೆ ಹೋಗಿದ್ದೆ ಎಂದು ತಿಳಿದಾಗ ಅವನು ಈ ಮಸೀದಿಗೆ ಹೋಗಬೇಡ ಇದು ಖಾದಿಯಾನಿಯರ ಮಸೀದಿಯಾಗಿದೆ ಅವರು ಹೊಸ ಪ್ರವಾದಿಯನ್ನು ಸೃಷ್ಟಿಸಿದ್ದಾರೆ. ಮತ್ತು ಆ ವ್ಯಕ್ತಿಯು ಹಝ್ರತ್ ಪೈಗಂಬರ್(ಸ) ಅವರನ್ನು ನಿಂದಿಸುತ್ತಾನೆ (ನೌಝುಬಿಲ್ಲಾಹ್) ಮತ್ತು ಇಸ್ಲಾಮ್ ಧರ್ಮದಲ್ಲಿ ಹೊಸತನಗಳನ್ನು ಸೃಷ್ಟಿಸಿದ್ದಾನೆ ಮತ್ತು ಇಸ್ಲಾಮಿನ ಬೋಧನೆಗಳನ್ನು ಬದಲಾಯಿಸಿದ್ದಾನೆ ಎಂದು ಹೇಳಿದನು. ಆದರೆ ನಾನು ನಮಾಝ್‌ಗೆ ಸತತವಾಗಿ ಬರುತ್ತಿದ್ದೆ ಮತ್ತು ಪ್ರಶ್ನೆಗಳಿಗೆ ಉತ್ತರಗಳನ್ನು

ಪಡೆಯುತ್ತಿದ್ದೆ ಮತ್ತು ಅಲ್ಲಾಹನು ನನ್ನ ಹೃದಯವನ್ನು ಅಹ್ಮದಿಯತ್ತಿಗೆ ಬೆಳಗಿಸಿದನು ಆದರೆ ಈಗ ಈ ಭಾಷಣವನ್ನು ಕೇಳಿದ ನಂತರ ನಾನು ಮತ್ತೊಮ್ಮೆ ಜಮಾಅತ್‌ನ ವಿರೋಧಿಗಳು ಹೇಗೆ ಜನರನ್ನು ಜಮಾಅತ್‌ನಿಂದ ದೂರವಿಡುತ್ತಾರೆ ಎಂದು ಅರಿತುಕೊಂಡೆ. ಆದಾಗ್ಯೂ, ನಾನು ಹಿಂತಿರುಗಿ ಈ ಜನರಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಬರಹಗಳಿಂದ ಉತ್ತರಿಸುತ್ತೇನೆ, ಈ ಸಂಬೋಧನೆಯನ್ನು ಅವರ ಮುಂದೆ ಇಡುತ್ತೇನೆ.

ಚಿಲಿಯ ಕೇಂದ್ರ ಸರ್ಕಾರದಲ್ಲಿ ಡೈರೆಕ್ಟರ್ ಆಫ್ ವರ್‌ಶಿಪ್ ಆಗಿ ಸೇವೆ ಮಾಡುತ್ತಿರುವ ಒಬ್ಬ ಅತಿಥಿ ಉಮರ್ ಗೈಬೂರ್ ಸಾಹಿಬ್ ಹೇಳುತ್ತಾರೆ: ಅಹ್ಮದಿಯಾ ಜಮಾತ್ ಬಗ್ಗೆ ದೇಶದಲ್ಲಿ ಸ್ಥಾಪಿತವಾದ ಮುಸ್ಲಿಂ ಸಂಘಟನೆಗಳ ಅಭಿಪ್ರಾಯವನ್ನು ನಾನು ಕೇಳಿದೆ ಮತ್ತು ಅವರೆಲ್ಲರೂ ನಕಾರಾತ್ಮಕ ಅನಿಸಿಕೆಗಳನ್ನು ವ್ಯಕ್ತಪಡಿಸಿದ್ದಾರೆ, ಅದರ ಸಾರಾಂಶವೆಂದರೆ ಅವರು ಮುಸ್ಲಿಮರಲ್ಲ. ಅವರು ಹೇಳುತ್ತಾರೆ: ಜಲ್ಸದಲ್ಲಿ ನಿಮ್ಮ ಖಲೀಫರನ್ನು ಭೇಟಿಯಾದೆ. ತದನಂತರ ನಾನು ನಿಮ್ಮ ಜಮಾಅತ್ತಿನ ಸದಸ್ಯರಿಗೆ ವಗ್ದಾನ ನೀಡುತ್ತೇನೆ: ನಾನು ನನ್ನ ಸಂಪೂರ್ಣ ಪಾತ್ರವನ್ನು ನಿರ್ವಹಿಸುತ್ತೇನೆ ಮತ್ತು ನನ್ನ ಪ್ರಭಾವದಲ್ಲಿರುವ ಜನರಿಗೆ ನನ್ನ ವೈಯಕ್ತಿಕ ಅನುಭವಗಳನ್ನು ತೋರಿಸುತ್ತೇನೆ, ಅಹ್ಮದಿಯರು ಕೇವಲ ಮುಸ್ಲಿಮರಲ್ಲ ಬದಲಿಗೆ ಅವರು ಅತ್ಯುತ್ತಮ ಮತ್ತು ಆದರ್ಶ ಮುಸ್ಲಿಮರಾಗಿದ್ದಾರೆ. ಅವರು ಹೇಳುತ್ತಾರೆ: ಚಿಲಿಯಲ್ಲಿ ನಿಮ್ಮ ಜಮಾಅತ್ ಅನ್ನು ಸ್ಥಾಪಿಸಲು ನಾನು ನನ್ನ ಕೈಲಾದಷ್ಟು ಪ್ರಯತ್ನಿಸುತ್ತೇನೆ. ಖಲೀಫರ ಮೊದಲ ದಿನದ ಭಾಷಣವು ನನಗೆ ವಿಶೇಷವಾಗಿ ಇಷ್ಟವಾಯಿತು, ಅದರಲ್ಲಿ ಅವರು ಶಿಸ್ತು ಮತ್ತು ಆಡಳಿತಾತ್ಮಕ ವಿಷಯಗಳ ಬಗ್ಗೆ ಪ್ರವಚನ ನೀಡಿದರು. ನಾನು ಅನೇಕ ಧಾರ್ಮಿಕ ಸಭೆಗಳಲ್ಲಿ ಭಾಗವಹಿಸಿದ್ದೇನೆ, ಆದರೆ ಸ್ವಯಂ ಆಡಳಿತದ ವ್ಯವಹಾರಗಳಲ್ಲಿ ಧಾರ್ಮಿಕ ಮುಖಂಡರನ್ನು ಮುನ್ನಡೆಸುವುದನ್ನು ನಾನು ನೋಡಿಲ್ಲ. ನಿಮ್ಮ ಖಲೀಫರು ಜಮಾತ್‌ನ ಆಧ್ಯಾತ್ಮಿಕ ಮತ್ತು ನೈತಿಕ ಸುಧಾರಣೆಗಾಗಿ ಮತ್ತು ಆಡಳಿತಾತ್ಮಕ ಸುಧಾರಣೆಗಾಗಿ ಶ್ರಮಿಸುತ್ತಿದ್ದಾರೆಂದು ತೋರಿಸುತ್ತದೆ ಏಕೆಂದರೆ ಈ ಧರ್ಮೋಪದೇಶವನ್ನು ಕೇಳಿ ನನಗೆ ತುಂಬಾ ಆಶ್ಚರ್ಯ ಮತ್ತು ಸಂತೋಷವಾಯಿತು.

ಹಾಲೆಂಡ್‌ನ ಮಹಿಳೆಯೊಬ್ಬರು ಶ್ರೀಮತಿ ಪೆಟ್ರೀಷಿಯಾ ಹೇಳುತ್ತಾರೆ: ಮೊದಲನೆಯದಾಗಿ, ಜಲ್ಸಾ ಯುಕೆ 2024 ರಲ್ಲಿ ನಿಮ್ಮ ಆತಿಥ್ಯಕ್ಕಾಗಿ ನಾನು ನಿಮಗೆ ಧನ್ಯವಾದ ಹೇಳಲು ಬಯಸುತ್ತೇನೆ ಮತ್ತು ಹಲವಾರು ಜನರು, ಪ್ರಪಂಚದ ವಿವಿಧ ಭಾಗಗಳಿಂದ ಬಂದಿದ್ದರು ಮತ್ತು ಸಹೋದರತ್ವದ ಅದ್ಭುತ ಪ್ರದರ್ಶನವಿತ್ತು. ಇಂಡೋನೇಷ್ಯಾದಿಂದ ಹಿಡಿದು ಅಮೆರಿಕದವರೆಗಿನ ದೇಶಗಳ ಜನರಿದ್ದರು. ಪೀಸ್ ವಾಕ್, ಪೀಸ್ ಕಾನ್ಫರೆನ್ಸ್ ಮುಂತಾದ ನಿಮ್ಮ ಕೂಟಗಳಲ್ಲಿ ನಾನು ಸೇರುತ್ತೇನೆ ಎಂದು ಅವರು ಹೇಳುತ್ತಾರೆ. ಈಗ ಈ ಜಲ್ಸದಲ್ಲಿ ಭಾಗವಹಿಸುವುದು ನನ್ನ ಮುಂದಿನ ಹೆಜ್ಜೆಯಾಗಿದೆ. ಪ್ರತಿನಿತ್ಯ ಸಾವಿರಾರು ಪಾಲ್ಗೊಳ್ಳುವವರನ್ನು ನಿಭಾಯಿಸುವುದು ಮತ್ತು ಗ್ರಾಮವನ್ನು ಸ್ಥಾಪಿಸುವುದು ಮತ್ತು ಎಲ್ಲಾ ಲಾಜಿಸ್ಟಿಕ್ಸ್ ಮತ್ತು ಎಲ್ಲಾ ಸೌಲಭ್ಯಗಳನ್ನು ಒಳಗೊಂಡಂತೆ ಅದನ್ನು ನಿರ್ಮಿಸುವುದನ್ನು ನಾನು ಇಲ್ಲಿ ನೋಡಿದೆ. ಅಪಾರ ಸಂಖ್ಯೆಯಲ್ಲಿ ಜನರು ಪರಸ್ಪರ ಸಹಕಾರ ನೀಡುತ್ತಿರುವುದು ಕಂಡು ಬಂತು. ಯಾವುದೇ ಸಾಲುಗಳು ಇರಲಿಲ್ಲ. ಜನರು ಒಟ್ಟಾಗಿ ಸ್ವಚ್ಛಗೊಳಿಸುತ್ತಿದ್ದರು. ಜಲ್ಸವನ್ನು ಸಾಧ್ಯವಾಗಿಸಿದ ಸಂಪೂರ್ಣ ಸಿಬ್ಬಂದಿ ತಂಡ ಮತ್ತು ಸ್ವಯಂಸೇವಕರ ತಂಡಕ್ಕೆ ಅಭಿನಂದನೆಗಳು. ಯುವ ವಿದ್ಯಾರ್ಥಿಗಳು ಮತ್ತು ಪ್ರತಿಯೊಬ್ಬರೂ ಸಣ್ಣ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವುದು, ದೊಡ್ಡ ಉದ್ದೇಶಕ್ಕೆ ಕೊಡುಗೆ ನೀಡುವುದನ್ನು ನೋಡಲು ಯಾವಾಗಲೂ ಸಂತೋಷವಾಗುತ್ತದೆ. ವಿವಿಧ ಸೆಷನ್‌ಗಳಲ್ಲಿ ಭಾಗವಹಿಸುವ ಮೂಲಕ ಶಾಂತಿಯುತ ಶಕ್ತಿಯನ್ನು ಅನುಭವಿಸಿದೆ ಎಂದು ಅವರು ಹೇಳುತ್ತಾರೆ, ವಿಶೇಷವಾಗಿ ಜಾಗತಿಕ ಬೈಅತ್ ಅಧಿವೇಶನ, ಇದು ತನ್ನ ಜೀವನದುದ್ದಕ್ಕೂ ನೆನಪಿನಲ್ಲಿ ಉಳಿಯುತ್ತದೆ. ಜಮಾಅತ್ ಮಾಡುತ್ತಿರುವಂತೆ ಜಗತ್ತಿನಲ್ಲಿರುವ ಪ್ರತಿಯೊಬ್ಬರೂ ಮಾನವೀಯತೆಯ ಬಗ್ಗೆ ಹೆಚ್ಚಿನ ಅರಿವು, ಜಾಗೃತಿ ಮತ್ತು ಸಹಾನುಭೂತಿ ಮೂಡಿಸಿದರೆ, ಖಂಡಿತವಾಗಿಯೂ ಜಾಗತಿಕ ಸಮಸ್ಯೆಗಳನ್ನು ಪರಿಹರಿಸಬಹುದು ಎಂದು ಅವರು ಹೇಳುತ್ತಾರೆ.

ಅರ್ಜೆಂಟೀನಾದ ರಾಷ್ಟ್ರೀಯ ಆರಾಧನಾ ಕಾರ್ಯದರ್ಶಿಯನ್ನು ಪ್ರತಿನಿಧಿಸಿದ ಅರ್ಜೆಂಟೀನಾದ ಅತಿಥಿ ಶ್ರೀ ತೋಮಸ್ ರಾಂಡಲ್ ಅವರು ಹೇಳುತ್ತಾರೆ: ಎಷ್ಟು ಉತ್ತಮವಾಗಿ ಮತ್ತು ಶಿಸ್ತಿನಿಂದ ನೀವು ಇಷ್ಟು ದೊಡ್ಡ ಜನಕೂಟದ ವ್ಯವಸ್ಥೆ ಮಾಡಿದ್ದೀರಿ ಎಂಬುವುದಾಗಿ ನಿಮ್ಮ ಜಮಾಅತಿನ ಜಲ್ಸವನ್ನು ನಾನು ಅಸೂಯೆಯ ದೃಷ್ಟಿಯಿಂದ ನೋಡಿದೆ. ಇದು ನಮ್ಮ ದೇಶದಲ್ಲಿ ಅಸಾಧ್ಯ. ಮಹಿಳೆಯರನ್ನು ಸಂಬೋಧಿಸಿ ಖಲೀಫರು ಮಾಡಿದ ಭಾಷಣ ನನಗೆ ಇಷ್ಟವಾಯಿತು. ಸಮಾಜದ ಒತ್ತಡ ಮತ್ತು ಪಾಶ್ಚಿಮಾತ್ಯ ಲೋಕದ ಪ್ರಭಾವ ಇದ್ದು ಕೂಡ ನೀವು ಸುದೃಢವಾಗಿ ನಿಮ್ಮ ತತ್ವಗಳಲ್ಲಿ ನೆಲೆಯೂರಿ ನಿಂತಿದ್ದೀರಿ. ಅವರು ಹೇಳುತ್ತಾರೆ, ನಾನು ಕ್ರೈಸ್ತ ಮತಕ್ಕೆ ಸೇರಿದ್ದೇನೆ ನಾನು ಸಂಪೂರ್ಣ ವಿಷಯಗಳನ್ನು ಒಪ್ಪುವುದಿಲ್ಲ ಆದರೆ ವಿಶೇಷವಾಗಿ ಕುಟುಂಬ ಜೀವನಕ್ಕೆ ಸಂಬಂಧಿಸಿದ ಸಮಸ್ಯೆಗಳು ಮುಸ್ಲಿಮೇತರನಾಗಿ ನನಗೆ ತುಂಬಾ ಉಪಯುಕ್ತವಾಗಿವೆ.

ತೈವಾನ್‌ನ ಅತಿಥಿ ಡಾ. ಕ್ರಿಸ್ಪಿ ಚಾಂಗ್ ಸಾಹಿಬಾ, ವಿಮಾನ ನಿಲ್ದಾಣದಿಂದ ನಮಗೆ ಉತ್ತಮ ಸ್ವಾಗತ ಲಭಿಸಿತು ಎಂದು ಹೇಳುತ್ತಾರೆ. ನಮ್ಮನ್ನು ತುಂಬಾ ಆತಿಥ್ಯದಿಂದ ನಡೆಸಿಕೊಳ್ಳಲಾಯಿತು ಮತ್ತು ನಂತರ ನಾವು ಜಲ್ಸಾದಲ್ಲಿ ಸೇರಲು ಹೋದೆವು, ಅಲ್ಲಿ ಸಾವಿರಾರು ಸ್ವಯಂಸೇವಕರು ಕೆಲಸ ಮಾಡುವುದನ್ನು ನಾವು ನೋಡಿದ್ದೇವೆ. ನನ್ನ ಆಶ್ಚರ್ಯಕ್ಕೆ ಕೊನೆಯೇ ಇರಲಿಲ್ಲ. ಪ್ರಪಂಚದ ಹಲವು ದೇಶಗಳಲ್ಲಿ ನಡೆದ ದೊಡ್ಡ ಸಮ್ಮೇಳನಗಳಲ್ಲಿ ನಾನು ಭಾಗವಹಿಸಿದ್ದೇನೆ, ಆದರೆ ಸ್ವಯಂಸೇವಕರು ಆಯೋಜಿಸಿದ ಅಂತಹ ದೊಡ್ಡ ಸಮ್ಮೇಳನವನ್ನು ನಾನು ನೋಡಿಲ್ಲ ಎಂದು ಅವರು ಹೇಳುತ್ತಾರೆ. ಲಜ್ನಾ ಅವರನ್ನು ಉದ್ದೇಶಿಸಿದ ಭಾಷಣದಲ್ಲಿ, ಖಲೀಫರು ಅಹ್ಮದಿ ಹುಡುಗಿಯರ ಜೀವನವನ್ನು ನಡೆಸುವ ಅತ್ಯಂತ ಸುಂದರವಾದ ಮಾರ್ಗಗಳನ್ನು ಸಹ ಬೋಧಿಸಿದರು. ಈ ಭಾಷಣದ ಸಮಯದಲ್ಲಿ, ನಾನು ಹುಡುಗಿಯರ ಅಭಿವ್ಯಕ್ತಿಗಳನ್ನು ಗಮನಿಸುತ್ತಿದ್ದೆ. ಹುಡುಗಿಯರು ಈ ಸಲಹೆಗಳನ್ನು ಕೇಳುತ್ತಿದ್ದ ಗಮನವು ಅಹ್ಮದಿ ಹುಡುಗಿಯರು ಮತ್ತು ಯುವ ಪೀಳಿಗೆ ಅವರ ಖಲೀಫಾವನ್ನು ಪ್ರೀತಿಸುತ್ತಾರೆ ಎಂದು ತೋರಿಸಿದೆ. ನಾನು ಮೊದಲ ಬಾರಿಗೆ ಇಮಾಮ್ ಅವರನ್ನು ಭೇಟಿಯಾಗುತ್ತಿದ್ದೆ, ನಮ್ಮ ಭೇಟಿಯು ಅತ್ಯಂತ ಔಪಚಾರಿಕ ರೀತಿಯಲ್ಲಿ ನಡೆಯುತ್ತದೆ, ನಾವು ಅನೇಕ ರೀತಿಯ ಸಮಸ್ಯೆಗಳನ್ನು ಮತ್ತು ಸೂಚನೆಗಳನ್ನು ಎದುರಿಸುತ್ತೇವೆ ಎಂದು ಭಾವಿಸಿದ್ದೆ, ಆದರೆ ನಮ್ಮ ಎಲ್ಲಾ ಮಾತುಕತೆಗಳು ಅತ್ಯಂತ ಅನೌಪಚಾರಿಕ ರೀತಿಯಲ್ಲಿ ನಡೆಯಿತು. ಪ್ರಸ್ತುತ ಪರಿಸ್ಥಿತಿ, ತೈವಾನ್‌ನ ಬಗ್ಗೆಯೂ ಅವರು ವಿಚಾರಿಸಿದರು, ಆದರೆ ನಾವು ಇಮಾಮ್‌ರ ಪ್ರಶ್ನೆಗಳಿಗೆ ಉತ್ತರಿಸುವುದರಲ್ಲಿ ಮುಳುಗಿದ್ದೆವು, ನಮಗೆ ಏನನ್ನೂ ಕೇಳಲು ಅವಕಾಶವೇ ಲಭಿಸಲಿಲ್ಲ. ಆದಾಗ್ಯೂ, ಜಲ್ಸವು ಅವರ ಮೇಲೆ ಸಕಾರಾತ್ಮಕ ಪರಿಣಾಮ ಬೀರಿತು.

ತೈವಾನ್‌ನ ಇನ್ನೊಬ್ಬ ಅತಿಥಿ ಡಾ. ಫ್ರಾಂಕ್ ಹೇಳುತ್ತಾರೆ: ಅವರು ಸುದೀರ್ಘ ಪ್ರಯಾಣದ ನಂತರ ಈ ಸಮ್ಮೇಳದಲ್ಲಿ ಭಾಗವಹಿಸಿದ್ದರು. ತೈವಾನ್‌ನಿಂದ ಪ್ರಯಾಣಿಸಿದ ನಂತರ, ನಾವು ಬೀಜಿಂಗ್‌ಗೆ ಬಂದೆವು ಮತ್ತು ತೈವಾನ್‌ನಲ್ಲಿ ಭೂಕಂಪ ಸಂಭವಿಸಿದ್ದರಿಂದ ನಮ್ಮ ವಿಮಾನವು ರದ್ದಾಯಿತು, ಆದರೂ ನಾವು ಪ್ರಯಾಣ ಮಾಡಿದೆವು, ಸುರಕ್ಷಿತವಾಗಿ ಬಂದಿದ್ದೇವೆ ಮತ್ತು ನಮ್ಮ ಪ್ರವಾಸವು ಪವಾಡ ಎಂದು ನಾವು ಭಾವಿಸಿದೆವು. ಅವರು ಹೇಳುತ್ತಾರೆ: ಜಲ್ಸದಲ್ಲಿ ಸೇರಿದ ನಂತರ ಇದು ಅಲ್ಲಾಹನ ವಿಧಿಯಾಗಿದೆ ಎಂದು ಭಾವಿಸಿದ್ದೆವು. ಜಲ್ಸದ ಉದ್ಘಾಟನಾ ಭಾಷಣದಲ್ಲಿ ಅಹ್ಮದಿಯಾ ಜಮಾಅತ್ತಿನ ಇಮಾಮರು ಇದು ಲೌಕಿಕ ಸಭೆಯಲ್ಲ ಬದಲಿಗೆ ಆಧ್ಯಾತ್ಮಿಕ ಸಭೆಯಾಗಿದೆ ಎಂದು ಹೇಳಿದಾಗ, ಮೇಲ್ನೋಟಕ್ಕೆ ಕಷ್ಟಕರವಾದ ಸಂದರ್ಭಗಳ ನಡುವೆಯೂ ಅಲ್ಲಾಹನು ನಮಗೆ ಜಲ್ಸದಲ್ಲಿ ಭಾಗವಹಿಸಲು ಅವಕಾಶವನ್ನು ನೀಡಿದ ರೀತಿಯಲ್ಲಿ ನನ್ನ ವಿಶ್ವಾಸವು ಇನ್ನಷ್ಟು ದೃಢವಾಯಿತು. ಇದು ದೇವರ ಕೊಡುಗೆ ಮತ್ತು ಪವಾಡದ ಫಲಿತಾಂಶವಾಗಿದೆ. ಅವರು ಹೇಳುತ್ತಾರೆ: ತೈವಾನ್‌ನಿಂದ ಜಲ್ಸಕ್ಕೆ ಸೇರುವ ಜನರಲ್ಲಿ ನಾವು ದಂಪತಿಗಳು ಮೊದಲಾಗಿದ್ದೇವೆ. ಅಹ್ಮದಿಯಾ ಜಮಾಅತ್ ಅತ್ಯಂತ ಶಾಂತಿಯುತ ಮತ್ತು ಸುಸಂಘಟಿತ ಮತ್ತು ನೈತಿಕ ಜಮಾಅತ್ ಎಂದು ನಮ್ಮ ದೇಶವಾಸಿಗಳಿಗೆ ತಿಳಿಸುವ ಪ್ರತಿಜ್ಞೆಯೊಂದಿಗೆ ನಾವು ಈ ಜಲ್ಸಾದಿಂದ ಹಿಂತಿರುಗುತ್ತಿದ್ದೇವೆ ಮತ್ತು ಮುಂದಿನ ವರ್ಷಗಳಲ್ಲಿ ಜಲ್ಸಾ ಸಲಾನದಲ್ಲಿ ಹೆಚ್ಚಿನ ಅತಿಥಿಗಳನ್ನು ಸೇರಲು ನಾವು ಪ್ರೋತ್ಸಾಹಿಸುತ್ತೇವೆ.

ಕೆನಡಾದಿಂದ ಬಂದ ಇರಾನ್ ಮೂಲದ ಅತಿಥಿ ಇವರು ನನಗೆ ಯಾಸೀನ್ ಅಹ್ಮದಿ ಸಾಹಿಬರಂತೆ ಭಾಸವಾಗುತ್ತದೆ. ಅವರು ತತ್ವಶಾಸ್ತ್ರದಲ್ಲಿ ಪಿಎಚ್‌ಡಿ ಹೊಂದಿದ್ದಾರೆ. ಪತ್ರಕರ್ತರೂ ಆಗಿದ್ದಾರೆ. ಅವರು ಹೇಳುತ್ತಾರೆ: ಅಹ್ಮದೀಯ ಜಲ್ಸಾ ಸಾಲಾನವನ್ನು ಧರ್ಮದ ರೂಪದಲ್ಲಿ ಯುಕ್ತಿ ಮತ್ತು ಬುದ್ಧಿಶಕ್ತಿಯ ಭವ್ಯವಾದ ಪ್ರದರ್ಶನವಾಗಿದೆ ಎಂದು ನಾನು ಕಂಡುಕೊಂಡೆ. ಜಲ್ಸಾ ಸಾಲಾನದ ಉತ್ಸಾಹವು ಮುಸ್ಲಿಮರಲ್ಲಿ ಸಮಾನತೆಯ ಸಂಕೇತಗಳಿಂದ ತುಂಬಿತ್ತು. ನಾನು ಈ ಜಲ್ಸದಲ್ಲಿ ಭಾಗವಹಿಸಿದಾಗ, ಮುಸ್ಲಿಮರು ಓಣ ಮತ್ತು ಹೊಂದಿಕೊಳ್ಳದ ಧಾರ್ಮಿಕ ವ್ಯಾಖ್ಯಾನಗಳಿಂದ ದೂರ ಸರಿಯುತ್ತಿದ್ದಾರೆ ಮತ್ತು ಭೂಮಿಯ ಮೇಲೆ ವಾಸಿಸುವ ಮಾನವರ ಬಗ್ಗೆ ಸಹಾನುಭೂತಿಯ ಮುಕ್ತ ದಿಗಂತಕ್ಕೆ ಮರಳುತ್ತಿದ್ದಾರೆ ಎಂದು ನಾನು ಮೊದಲ ಕ್ಷಣದಿಂದಲೇ ಭಾವಿಸಿದೆ. ಜಮಾಅತ್ ಅನ್ನು ನೋಡುವಾಗ, ಅಹ್ಮದೀಯರ ಇಸ್ಲಾಮಿನ ಬೋಧನೆಗಳ ಘನತೆ ಮತ್ತು ತಾಳ್ಮೆ ಮತ್ತು ಮಧ್ಯಮ ವ್ಯಾಖ್ಯಾನವು ಶತಮಾನಗಳ ಧಾರ್ಮಿಕ ರಕ್ತಪಾತ ಮತ್ತು ಹಿಂಸಾಚಾರದ ನಂತರ ದೈವಿಕ ಸೂಚನೆಗಳ ನೆರಳಿನಲ್ಲಿ ಭದ್ರತೆ ಮತ್ತು

ಶಾಂತಿಯುತ ಜೀವನದ ಭರವಸೆಯಾಗಿದೆ ಎಂದು ನಾನು ಅರಿತುಕೊಂಡೆ. ಆಧುನಿಕ ನಾಗರಿಕತೆಯೊಂದಿಗೆ ಅಹ್ಮದಿಯತ್ತಿನ ಬೋಧನೆಗಳ ಸಮನ್ವಯತೆಯು ಸ್ಪಷ್ಟವಾಗಿ ಹೈಲೈಟ್ ಮಾಡಲಾದ ಸುಂದರವಾದ ಅಂಶಗಳಲ್ಲಿ ಒಂದಾಗಿದೆ. ಅಹ್ಮದೀಯ ಜಮಾಅತ್‌ನ ವಿಚಾರಗಳು ಮುಸ್ಲಿಮರಲ್ಲಿ ಮತ್ತು ಭೂಮಿಯ ಮೇಲೆ ವಾಸಿಸುವ ಇತರ ಜನರಲ್ಲಿ ಹೆಚ್ಚು ಹೆಚ್ಚು ವೈಭವಯುತವಾಗಿ ಮತ್ತು ವೇಗವಾಗಿ ಹರಡಲಿ ಎಂದು ನಾನು ಭಾವಿಸುತ್ತೇನೆ ಇದರಿಂದ ಪ್ರತಿಯೊಬ್ಬರೂ ಮೋಕ್ಷ, ಸಮೃದ್ಧಿ ಮತ್ತು ಯಶಸ್ವಿ ಜೀವನವನ್ನು ಅನುಭವಿಸಬಹುದು.

ಬೆಲೀಝ್‌ನಿಂದ ಆಗಮಿಸಿದ್ದ ಅತಿಥಿಯೊಬ್ಬರು ರೊನಾಲ್ಡ್ ಹೈಡ್ ಹೇಳುತ್ತಾರೆ. ಬೈಅತ್ ಸಮಾರಂಭದಲ್ಲಿ ಅವರು ತಮ್ಮ ಭಾವನೆಗಳನ್ನು ವ್ಯಕ್ತಪಡಿಸಲು ಸಾಧ್ಯವಿಲ್ಲ. ಅವರು ಅಲ್ಲಾಹನ ಉಪಸ್ಥಿತಿಯನ್ನು ಅನುಭವಿಸುತ್ತಿದ್ದರು. ಅವರು ಹೇಳುತ್ತಾರೆ: ಅನೇಕ ಪುರುಷರು ಯಾವುದೇ ಪ್ರಾಪಂಚಿಕ ಕಾಳಜಿಯಿಲ್ಲದೆ ಜೋರಾಗಿ ಅಳುತ್ತಿದ್ದರು ಮತ್ತು ಅಲ್ಲಾಹನ ಕ್ಷಮೆಗಾಗಿ ಪ್ರಾರ್ಥಿಸುತ್ತಿದ್ದರು. ಬೈಅತ್‌ನ ಈ ಅನುಭವವು ಅವರ ಜೀವನದ ಮೇಲೆ ಆಳವಾದ ಪ್ರಭಾವವನ್ನು ಬೀರಿದೆ. ಯಾವುದೇ ಮದ್ಯ ಅಥವಾ ಸಂಗೀತವಿಲ್ಲದೆ ಇಷ್ಟು ದೊಡ್ಡ ಸಭೆ ಮತ್ತು ಇಷ್ಟು ದೊಡ್ಡ ಸಂಖ್ಯೆಯ ಜನರನ್ನು ನೋಡುವುದು ನಿಜಕ್ಕೂ ಆಶ್ಚರ್ಯಕರವಾಗಿತ್ತು ಮತ್ತು ಪ್ರತಿಯೊಬ್ಬರೂ ಆಧ್ಯಾತ್ಮಿಕತೆಯನ್ನು ವರ್ಧಿಸಿಕೊಳ್ಳಲು ಬಯಸುತ್ತಿದ್ದಾರೆ ಎಂದು ನೋಡುವುದು ನಿಜವಾಗಿಯೂ ಪ್ರಶಂಸನೀಯವಾಗಿದೆ. ಇದು ನಿಜವಾಗಿಯೂ ಜೀವನವನ್ನು ಬದಲಾಯಿಸುವ ಅನುಭವವಾಗಿತ್ತು. ಕೇವಲ ಡ್ಯುಟಿ ನಿರ್ವಹಿಸುವವರಷ್ಟೇ ಅಲ್ಲ, ಬದಲಿಗೆ ಭಾಗವಹಿಸುವವರನ್ನು ನೋಡಿ ಪ್ರಭಾವಿತರಾಗುತ್ತಾರೆ ಮತ್ತು ಇದು ಆ ಜನರಿಗೆ ಮೌನ ತಬ್ಲೀಗ್ ಆಗಿದೆ.

**(ಮುಂದುವರಿಯುವುದು)**

## (ಬದರ್ ಸಂಚಿಕೆ-34,35ರ ಪುಟ ಸಂಖ್ಯೆ-11ರ ಖುತ್‌ಬ ಜುಮುಅದ ಉಳಿದ ಭಾಗ)

ಇನ್ನೊಂದು ವರದಿಯಲ್ಲಿ, ಅಬ್ದುಲ್ಲಾ ಬಿನ್ ಉಬೈ ಅವರಿಗೆ ಸುದ್ದಿ ತಿಳಿದಾಗ, ಅವರೇ ಸ್ವತಃ ಹಝ್ರತ್ ಪೈಗಂಬರ್(ಸ)ರ ಸೇವೆಗೆ ಬಂದರು, ಮತ್ತು ಅವರು ಅಲ್ಲಾಹನ ಮೇಲೆ ಪ್ರಮಾಣ ಮಾಡಿದರು ಮತ್ತು ಝೈದ್ ನಿಮಗೆ ಹೇಳಿದ್ದನ್ನು ನಾನು ಹೇಳಲಿಲ್ಲ ಎಂದು ಹೇಳಿದನು ಎಂಬ ಉಲ್ಲೇಖವಿದೆ. ಮೂರನೇ ವರದಿಯಲ್ಲಿ ಹಝ್ರತ್ ಪೈಗಂಬರ್(ಸ) ಸ್ವತಃ ಅಬ್ದುಲ್ಲಾ ಬಿನ್ ಉಬಯ್ ಮತ್ತು ಅವರ ಸಂಗಡಿಗರನ್ನು ಕರೆಸಿದರು ಮತ್ತು ಅವರು ಅಂತಹ ಮಾತನ್ನು ಹೇಳಲಿಲ್ಲ ಎಂದು ಪ್ರಮಾಣ ಮಾಡಿದ್ದನು ಎಂಬ ಉಲ್ಲೇಖವಿದೆ. ಈ ಬಗ್ಗೆ ಅನ್ಸಾರ್ ಸಹಾಬಾ ಹೇಳಿದರು, ಆಶಾದಾಯಕವಾಗಿ, ಮಗು ಭ್ರಮೆಗೆ ಒಳಗಾಗಿರಬಹುದು ಮತ್ತು ಇಬ್ನ್ ಉಬಯ್ ಹೇಳಿದ್ದನ್ನು ನೆನಪಿಸಿಕೊಳ್ಳುತ್ತಿಲ್ಲ. ಇಬ್ನ್ ಉಬಯ್ಯನ ರಕ್ಷಣೆಗಾಗಿ ಅವರು ಇದನ್ನು ಹೇಳಿದರು ಏಕೆಂದರೆ ಅವನು ತಮ್ಮ ಸಮುದಾಯದಲ್ಲಿ ಗೌರವಾನ್ವಿತ ವ್ಯಕ್ತಿಯಾಗಿದ್ದನು. ಕೆಲವರು ಝೈದ್ ನಿಜ ಹೇಳುತ್ತಿದ್ದಾರೆಂದು ಭಾವಿಸಿದ್ದರು ಮತ್ತು ಕೆಲವರು ಅವನ ಮೇಲೆ ಅನುಮಾನ ವ್ಯಕ್ತಪಡಿಸಿದ್ದರು. ಝೈದ್ ಚಿಕ್ಕವನಾದರೂ ಸತ್ಯ ಹೇಳುತ್ತಿದ್ದಾನೆ ಎಂದು ಕೆಲವರು ನಂಬಿದ್ದರು. ಆದಾಗ್ಯೂ, ಹೆಚ್ಚಿನ ವಯಸ್ಸಾದವರು ಅವನನ್ನು ತಪ್ಪು ಎಂದು ಭಾವಿಸಿದ್ದರು.

ಹಝ್ರತ್ ಉಮರ್ ಬಿನ್ ಖತ್ತಾಬ್(ರ) ಹೇಳುತ್ತಾರೆ: ಇಬ್ನ್ ಉಬಯ್‌ನ ಘಟನೆ ಸಂಭವಿಸಿದಾಗ, ನಾನು ಹಝ್ರತ್ ಪೈಗಂಬರ್(ಸ)ರ ಸೇವೆಯಲ್ಲಿ ಭಾಗವಹಿಸಿದ್ದೆ, ಹಝ್ರತ್ ಪೈಗಂಬರ್(ಸ) ಅವರು ಮರದ ನೆರಳಿನಲ್ಲಿ ಕುಳಿತಿದ್ದರು ಮತ್ತು ಒಬ್ಬ ಕಪ್ಪು ಗುಲಾಮ ಅವರ ಬೆನ್ನನ್ನು ಒತ್ತುತ್ತಿದ್ದನು. ಅದನ್ನು ಕಂಡು ನಾನು ಹೇಳಿದೆ ಯಾ ರಸೂಲಲ್ಲಾಹ್(ಸ)!! ನಿಮಗೆ ಸೊಂಡ ನೋವು ಇರಬಹುದು ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ನಿನ್ನೆ ರಾತ್ರಿ ನನ್ನನ್ನು ಒಂಟೆಯು ನನಗೆ ಬೀಳಿಸಿತು.

ಈ ಮಾತುಗಳ ನಂತರ, ನಾನು ಮುಖ್ಯ ಮುಖ್ಯ ವಿಷಯಕ್ಕೆ ಬಂದೆ. ಅವರು ಹೇಳುತ್ತಾರೆ: ನಾನು ಹೇಳಿದೆ: ಯಾ ರಸೂಲಲ್ಲಾಹ್(ಸ)!! ಇಬ್ನ್ ಉಬಯ್ಯನ ಕುತ್ತಿಗೆಯನ್ನು ಹೊಡೆಯಲು ನನಗೆ ಅನುಮತಿಸಿರಿ. ಅದಕ್ಕೆ ರಸೂಲುಲ್ಲಾಹ್(ಸ) ಹೇಳಿದರು: ನಾನು ಸಹಾಬೀಯರನ್ನು ಅವನನ್ನು ವಧಿಸಲು ಆದೇಶಿಸುತ್ತಿದ್ದರೆ ಅವರು ಅವನನ್ನು ವಧಿಸುತ್ತಿದ್ದರು ಆದರೆ ಹೀಗೆ ಮಾಡುತ್ತಿದ್ದರೆ ಮದೀನಾದಲ್ಲಿ ಅನೇಕ ಜನರು ಇದನ್ನು ಅಹಿತಕರವೆಂದು ಕಂಡುಕೊಳ್ಳುತ್ತಾರೆ. ನಾನು ಹೇಳಿದೆ, ಯಾ ರಸೂಲಲ್ಲಾಹ್(ಸ)!! ನೀವು ಮುಹಮ್ಮದ್ ಬಿನ್ ಮುಸ್ಲಿಮನನ್ನು ವಧಿಸಲು ಆದೇಶಿಸಿರಿ. ಹಝ್ರತ್ ಪೈಗಂಬರ್(ಸ) ಹೇಳಿದರು: ನಾನು ನನ್ನ ಸಹಚರರನ್ನು ಕೊಲ್ಲುತ್ತಿದ್ದೇನೆ ಎಂದು ಜನರು ಹೇಳಬಾರದು. ನಾನು ಹೇಳಿದೆ, ನಂತರ ಜನರನ್ನು ಹೊರಡಲು ಆದೇಶಿಸಿರಿ. ಹೌದು ಇದು ಸರಿ ಎಂದು ಹಝ್ರತ್ ಪೈಗಂಬರ್(ಸ)ರು ಹೇಳಿದರು.

ಒಂದು ವರದಿಯಲ್ಲಿ ಹೀಗೆ ಪ್ರಸ್ತಾಪಿಸಲಾಗಿದೆ: ಹಝ್ರತ್ ಪೈಗಂಬರ್(ಸ) ಸ್ವತಃ ಹಝ್ರತ್ ಉಮರ್(ರ) ಅವರಿಗೆ ಹೊರಡಲು ಘೋಷಿಸಬೇಕೆಂದು ಆದೇಶಿಸಿದರು. ಇದು ಹಗಲಿನ ಸಮಯವಾಗಿತ್ತು ಸಾಮಾನ್ಯವಾಗಿ ಹಝ್ರತ್ ಪೈಗಂಬರ್(ಸ) ಪ್ರಯಾಣಿಸುತ್ತಿರಲಿಲ್ಲ. ಅಬ್ದುಲ್ಲಾಹ್ ಬಿನ್ ಉಬಯ್ ಖಂಡಿತವಾಗಿಯೂ ಹಾಗೆ ಹೇಳಿದ್ದನು ಎಂದು ಹಝ್ರತ್ ಪೈಗಂಬರ್(ಸ)ರಿಗೆ ಗೊತ್ತಿತ್ತು. ಅನಂತರ ಹಝ್ರತ್ ಪೈಗಂಬರ್(ಸ) ಹೊರಡಲು ಆದೇಶ ನೀಡಿದರು. ಅನ್ಸಾರಿನ ಕೆಲವು ಸರದಾರರು ಈ ಕುರಿತು ಕೇಳಿದಾಗ ಹಝ್ರತ್ ಪೈಗಂಬರ್(ಸ) ಹೇಳಿದರು: ನಿಮ್ಮ ಜೊತೆಗಾರನು ಏನು ಹೇಳಿರುವನು ಎಂದು ನಿಮಗೆ ಗೊತ್ತಿಲ್ಲವೇ? ಮದೀನಕ್ಕೆ ಮರಳಿ ಹೋಗಿ ಅತ್ಯಂತ ಆದರಣೀಯ ವ್ಯಕ್ತಿ ಅತ್ಯಂತ ನೀಚ ವ್ಯಕ್ತಿಯನ್ನು ಪಟ್ಟಣದಿಂದ ಹೊರಗೆ ಹಾಕುವನು ಎಂದು ಆತನು ಹೇಳಿರುವನು. ಇದನ್ನು ಆಲಿಸಿ ನಿಷ್ಠಾವಂತರಾದ ಅನ್ಸಾರ್ ಸಹಾಬಿಯರು ಹೀಗೆ ಹೇಳಿದರು: ಯಾ ರಸೂಲಲ್ಲಾಹ್, ಖಂಡಿತವಾಗಿಯೂ ನೀವು ಅತ್ಯಂತ ಆದರಣೀಯರಾಗಿರುವಿರಿ. ಎಲ್ಲ ಗೌರವಗಳು ಅಲ್ಲಾಹನಿಗೂ ಅವನ ಪ್ರವಾದಿಗೂ ಆಗಿವೆ. ನೀವು ಇಷ್ಟಪಡುವುದಾದರೆ ಅಬ್ದುಲ್ಲಾಹ್ ಬಿನ್ ಉಬಯ್‌ನನ್ನು ಪಟ್ಟಣದಿಂದ ಹೊರಗೆ ಹಾಕುವೆವು. ಅಥವಾ ನೀವು ಇಷ್ಟಪಡುವುದಾದರೆ ಆತನೊಡನೆ ಸೌಮ್ಯವಾಗಿ ವರ್ತಿಸಲಾಗುವುದು. ಅಲ್ಲಾಹನ ಆಣೆ! ಅಲ್ಲಾಹನು ನಿಮ್ಮನ್ನು ಮದೀನಾಕ್ಕೆ ಕರೆತಂದನು ಮತ್ತು ಅವನ ಜನರು ಅವನ ಪಟ್ಟಾಭಿಷೇಕಕ್ಕೆ ತಯಾರಿ ನಡೆಸುತ್ತಿದ್ದರು. ಅಲ್ಲಾಹನು ನಿಮ್ಮನ್ನು ಮದೀನಾಕ್ಕೆ ಕರೆತಂದಾಗ ಅವನ ರಾಜ್ಯವನ್ನು ನೀವು ಕಿತ್ತುಕೊಳ್ಳುತ್ತಿದ್ದೀರಿ ಎಂದ ಅವನು ಭಾವಿಸಿದನು.

(ಸಹೀಹ್ ಅಲ್-ಬುಖಾರಿ ಕಿತಾಬ್ ತಫ್ಸೀರ್ ಅಲ್-ಖುರ್‌ಆನ್, ಹದೀಸ್-4904, 4905) (ಹುದಸ್ಸಾರಿ ಮುಖದ್ದಮ ಫತ್‌ಹಲ್ ಬಾರಿ, ಪುಟ-468, ಓಲ್ಡ್ ಲೈಬ್ರರಿ ಕರಾಚಿ) (ಸೀರತ್ ಅಲ್-ಹಲ್ಬಿಯಾಹ್, ಸಂಪುಟ-2, ಪುಟ-389 ದಾರಾಲ್ ಕುತುಬ್ ಇಲ್‌ಮಿಯಾ ಬೈರುತ್) (ಫತ್ ಅಲ್-ಬಾರಿ ಶರ್ಹ್ ಸಹೀಹ್ ಅಲ್-ಬುಖಾರಿ, ಸಂಪುಟ-8, ಪುಟ-645, ಅಲ್-ಮಕ್ತಬ್ ಅಲ್-ಸಫಫಿಯಾ) (ಸೀರತ್ ಎನ್‌ಸೈಕ್ಲೋಪೀಡಿಯಾ, ಸಂಪುಟ-7, ಪುಟ-182, ದಾರುಸ್ಸಲಾಮ್ ರಿಯಾದ್) (ಸಬ್ಲುಲ್ ಹುದಾ ವರ್‌ಶಾದ್, ಸಂಪುಟ-4, ಪುಟ-348, 350 ದಾರುಲ್ ಕುತುಬ್ ಇಲ್‌ಮಿಯಾ ಬೈರುತ್) (ಸಬ್ಲುಲ್ ಹುದಾ ವರ್‌ಶಾದ್ (ಅನುವಾದಕ), ಸಂಪುಟ-4, ಪು-782, ಝಿಯಾವಿಯಾ ಪಬ್ಲಿಷರ್ಸ್ ಲಾಹೋರ್) (ಅಸ್ಸೀರತುನ್ನಬವೀಯಾ, ಪುಟ-670-671, ದಾರುಲ್ ಕುತುಬ್ ಇಲ್‌ಮಿಯಾ ಬೈರುತ್)

ಆದಾಗ್ಯೂ, ಹಝ್ರತ್ ಪೈಗಂಬರ್(ಸ) ಅವರು ಝೈದ್ ಹೇಳಿದ್ದನ್ನು ಮನವರಿಕೆ ಮಾಡಿದರು, ಅವರು ಸತ್ಯವನ್ನು ಹೇಳಿದರು ಮತ್ತು ಅಬ್ದುಲ್ಲಾ ಸುಳ್ಳು ಹೇಳುತ್ತಿದ್ದಾನೆ, ಆದರೆ ಆ ಸಮಯದಲ್ಲಿ ಅವರು ಮೌನವಾಗಿದ್ದರು ಮತ್ತು ಅವರು ಹೇಳಿದರು, ನಾವು ಮದೀನಾಗೆ ಹೋಗೋಣ. ಅಲ್ಲಿ ಯಾರು ಅತ್ಯಂತ ನೀಚ ವ್ಯಕ್ತಿ ಮತ್ತು ಯಾರು ಗೌರವಾನ್ವಿತರು ಎಂದು ನೋಡೋಣ. ಆದರೆ ಕೊನೆಗೆ ಅವನು ತಪ್ಪಿತಸ್ಥನೆಂದು ಸಾಬೀತಾಯಿತು ಮತ್ತು ಅವನು ಇಂತಹ ಮಾತುಗಳನ್ನು ಆಡಿದ್ದಾನೆ ಎಂದು ಸಾಬೀತಾಯಿತು. ಅಬ್ದುಲ್ಲಾಹ್ ಬಿನ್ ಉಬಯ್ ಹೇಳಿದ ಮಾತಿನ ಬಗ್ಗೆ ಹಝ್ರತ್ ಮಿರ್ಝಾ ಬಶೀರ್ ಅಹ್ಮದ್ ಸಾಹಿಬ್(ರ) ನೀಡಿದ ವಿವರಣೆಯನ್ನು ಮುಂದಿನ ಬಾರಿ ವಿವರಿಸುತ್ತೇನೆ. ಇನ್‌ಶಾ ಅಲ್ಲಾಹ್.

ಮುಂದಿನ ಜುಮಾದಿಂದ ಬ್ರಿಟನಿನ ವಾರ್ಷಿಕ ಜಲ್ಸ ಆರಂಭವಾಗುವುದು. ಅದಕ್ಕಾಗಿಯೂ ದುಆ ಮಾಡಿರಿ. ಅಲ್ಲಾಹನು ಎಲ್ಲ ವಿಧದಲ್ಲೂ ಅನುಗ್ರಹಿತಗೊಳಿಸಲಿ. ಎಲ್ಲ ಕಾರ್ಯಕರ್ತರಿಗೂ ಉನ್ನತ ಸ್ವಭಾವಗುಣಗಳನ್ನು ತೋರಿಸುತ್ತಾ ತ್ಯಾಗ ಮನೋಭಾವದಿಂದ ತಮ್ಮ ಕರ್ತವ್ಯಗಳನ್ನು ನೆರವೇರಿಸಲು ಅಲ್ಲಾಹನು ಸೌಭಾಗ್ಯ ನೀಡಲಿ. ಆಗಮಿಸಿರುವ ಮತ್ತು ಯಾತ್ರೆಯಲ್ಲಿರುವ ಅತಿಥಿಗಳನ್ನು ಅಲ್ಲಾಹನು ಸಂರಕ್ಷಿಸಲಿ. ಆಮೀನ್.

ಈಗ ಕೆಲವು ದಿವಂಗತರ ಉಲ್ಲೇಖಗಳು ಇವೆ ಮತ್ತು ಅವರ ಜನಾಝಗಳನ್ನು ಸಹ ನಾನು ನಿರ್ವಹಿಸುವೆನು. ಮೊದಲನೆಯದಾಗಿ ದಅ್‌ವತೇ ಇಲಲ್ಲಾಹ್ ಶುಮಾಲಿ ಹಿಂದ್‌ನ ನಾಝಿರ್ ಹಮೀದ್ ಕೌಸರ್ ಸಾಹಿಬ್‌ರ ಪತ್ನಿಯಾದ ದಿವಂಗತ ಸಲೀಮ ಬಾನೂ ಸಾಹಿಬರದ್ದು. ಇತ್ತೀಚೆಗೆ ಅವರು ನಿಧನಹೊಂದಿದ್ದಾರೆ. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್.**

ದಿವಂಗತರು ಮೂಸಿಯಗಿದ್ದರು. ಮುಹಮ್ಮದ್ ಹಮೀದ್ ಕೌಸರ್ ಸಾಹಿಬ್ ಬರೆಯುತ್ತಾರೆ ಇವರು ಅಬ್ದುಲ್ ಘನಿ ಸಾಹಿಬ್ ಭದರ್ವಾ ಜಮ್ಮು ಕಶ್ಮೀರ ಅವರ ಪುತ್ರಿಯಾಗಿದ್ದರು. ಅಬ್ದುಲ್ ಘನೀ ಸಾಹಿಬ್ ಅವರು 1935 ರಲ್ಲಿ ಮೌಲ್ವಿ ಮುಹಮ್ಮದ್ ಹುಸೇನ್ ಸಾಹಿಬ್ ಅವರ

ಮೂಲಕ ಬೈಅತ್ ಮಾಡಿದ್ದರು. ಜಲ್ಸಾ ಸಾಲಾನ ಖಾದಿಯಾನ್‌ನಲ್ಲಿ ಗುಡ್ಡ ಮತ್ತು ಹಿಮದ ಹಾದಿಗಳಲ್ಲಿ ನಡೆದುಕೊಂಡು ಮತ್ತು ಸ್ಪ್ಲ ದೂರ ಕುದುರೆಯ ಮೇಲೆ ಸವಾರರಾಗಿ ಭಾಗವಹಿಸುತ್ತಿದ್ದರು. ಅವರು ತಮ್ಮ ಪತ್ನಿಯ ಬಗ್ಗೆ ಬರೆಯುತ್ತಾರೆ: ನಾವು ವಾಖಿಫೀನೆ ಝಿಂದಗಿಯರು ಪಡೆಯುತ್ತಿದ್ದ ಜೀವನ ಭತ್ಯೆ ತುಂಬಾ ಸಾಧಾರಣವಾಗಿರುತ್ತಿತ್ತು ಆದರೆ ಅವರು ತುಂಬಾ ಮಿತವ್ಯಯದಿಂದ ಬದುಕುತ್ತಿದ್ದರು ಮತ್ತು ಅತಿಥಿ ಸತ್ಕಾರಿ, ಸರಳ ಸ್ವಭಾವಿ, ಪ್ರಾರ್ಥಿಸುವ ಮತ್ತು ನಫ್ಲ್ ನಮಾಝ್‌ಗಳನ್ನು ಅನುಷ್ಠಿಸುವ, ಮಿತವ್ಯಯಿ ಮಹಿಳೆಯಾಗಿದ್ದರು. ಅವರಿಗೆ ಲಜ್ನ ಇಮಾಇಲ್ಲಾಹ್ ಸದರ್ ಆಗಿ ಮುಂಬಯಿಯಲ್ಲಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ದಿವಂಗತರ ಪತಿ ಕಬಾಬೀರ್‌ನಲ್ಲಿ ಮುಬಲ್ಲಿಗ್ ಆಗಿ ಇದ್ದಾಗ ಅಲ್ಲಿ ಬಹಳ ಬೇಗನೇ ಅರಬಿ ಭಾಷೆ ಮಾತನಾಡಲು ಕಲಿತರು ಮತ್ತು ಮಹಿಳೆಯರ ಶಿಕ್ಷಣ ಮತ್ತು ತರಬೇತಿಯಲ್ಲಿ ಪೂರ್ಣವಾಗಿ ಭಾಗಿಯಾದರು. 1986 ರಿಂದ 1997ರ ವರೆಗೆ ದಿವಂಗತರಿಗೆ ದೀರ್ಘಕಾಲ ಕಬಾಬೀರ್‌ನಲ್ಲಿ ಸದರ್ ಲಜ್ನಾ ಇಮಾಇಲ್ಲಾಹ್ ಆಗಿ ಸೇವೆ ಸಲ್ಲಿಸಲು ಸೌಭಾಗ್ಯ ಲಭಿಸಿತ್ತು. ಅವರು ಕಬಾಬೀರ್‌ನಲ್ಲಿ ಇಜ್ತಿಮಾ ನಡೆಸಲು ಆರಂಭಿಸಿದರು.

ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಲಜ್ನ ಇಮಾಇಲ್ಲಾಹ್ ಕಬಾಬೀರ್‌ನ ಇಜ್ತಿಮಾಗೆ ಸಂಬಂಧಪಟ್ಟು ಅವರನ್ನು ಶ್ಲಾಘಿಸುತ್ತಾ ಹೀಗೆ ಹೇಳಿದರು: ಲಜ್ನ ಇಮಾಇಲ್ಲಾಹ್ ಕಬಾಬೀರ್ ಪೂರ್ಣವಾಗಿಯೂ ಅರೇಬಿಯದ ಮಹಿಳೆಯರನ್ನು ಒಳಗೊಂಡಿರುವುದಾಗಿದೆ. ಅವರಲ್ಲಿ ಕೇವಲ ಒಬ್ಬರು ಭಾರತದ ಕಾಶ್ಮೀರದಿಂದ ಹೋಗಿರುವ ಮಹಿಳೆಯಾಗಿದ್ದಾರೆ. ಆದರೆ ಅವರು ಈಗ ಪೂರ್ಣವಾಗಿಯೂ ಅರೇಬಿಯರ ಹಾಗೆ ಆಗಿ ಬಿಟ್ಟಿದ್ದಾರೆ. ಅರೇಬಿಯರೊಂದಿಗೆ ಸೇರಿಕೊಂಡು ಅವರು ಅವರ ತರಬೇತಿ ಮಾಡಿದರು. ಮುಂದೆ ಕೌಸರ್ ಸಾಹಿಬ್ ಹೇಳುತ್ತಾರೆ: ನಂತರ ನಾನು 1998 ರಲ್ಲಿ ಭಾರತಕ್ಕೆ ಹಿಂದಿರುಗಿದಾಗ, ಅವರು ನನ್ನೊಂದಿಗೆ ಹಿಂದಿರುಗಿದರು ಮತ್ತು ಆರೋಗ್ಯ ಮತ್ತು ಸಂದರ್ಭಗಳು ಅನುಮತಿಸುವವರೆಗೆ, ಮೃತರು ನವಾಫ್ಲ್ ಮತ್ತು ಬೈತುದ್ದುಆಗೆ ದುಆ ಮಾಡುವುದಕ್ಕೆ ಮತ್ತು ಮಸ್ಜಿದ್ ಮುಬಾರಕ್ ಮತ್ತು ಬೈತ್ ಅಲ್-ಝಿಕ್ರ್ ಮತ್ತು ಬೆಹೆಶ್ತಿ ಮಖ್ಬರಕ್ಕೆ ಭೇಟಿ ನೀಡುತ್ತಿದ್ದರು.

ಶರೀಫ್ ಔದಾ ಸಾಹಿಬ್ ಅಮೀರ್ ಕಬಾಬೀರ್ ಅವರ ಬಗ್ಗೆ ಬರೆಯುತ್ತಾರೆ: ದಿವಂಗತರು ಲಜ್ನಾ ಇಮಾಅಲ್ಲಾಹ್‌ದ ಮೊದಲ ಅಧ್ಯಕ್ಷೆಯಾಗಿದ್ದರು. ಅತತವಾಗಿ ಆರು ವರ್ಷಗಳ ಕಾಲ ಕಾರ್ಯನಿರ್ವಹಿಸಿದರು. ಕೌಸರ್ ಸಾಹಿಬ್ ಅಧಿಕವಾಗಿ ಸೇವೆಸಲ್ಲಿಸಿದರು ಎಂದು ಬರೆದಿದ್ದಾರೆ , ಆದರೆ ಇವರು ಆರು ವರ್ಷ ಎಂದು ಬರೆದಿದ್ದಾರೆ. ಆದಾಗ್ಯೂ, ಅವರು ಅಲ್ಲಿದ್ದಷ್ಟು ದಿನಗಳು ಕಾರ್ಯನಿರ್ವಹಿಸಿದರು. ಮೃತರು ವಿವಿಧ ಧಾರ್ಮಿಕ ಪಾಠಗಳು ಮತ್ತು ಧಾರ್ಮಿಕ ಚಟುವಟಿಕೆಗಳ ಮೂಲಕ ಲಜ್ನಾಇಮಾಅಲ್ಲಾಹ್‌ದವರ ಶಿಕ್ಷಣ ಮತ್ತು ತರಬೇತಿಯಲ್ಲಿ ಪ್ರಮುಖ ಪಾತ್ರ ವಹಿಸಿದರು. ಮೃತರು ತಮ್ಮ ಉತ್ತಮ ನಡವಳಿಕೆಯಿಂದಾಗಿ ಜಮಾಅತ್ ಕಬಾಬೀರ್‌ದೊಂದಿಗೆ ಉತ್ತಮ ಸಂಬಂಧವನ್ನು ನಿರ್ಮಿಸಲು ಸಾಧ್ಯವಾಯಿತು. ಅವರು ಶೀಘ್ರದಲ್ಲೇ ಮಾತನಾಡುವ ಅರೇಬಿಕ್ ಭಾಷೆಯನ್ನು ಕಲಿತುಕೊಂಡರು ಮತ್ತು ಜಮಾಅತ್ತಿನ ಪುತ್ರರು ಮತ್ತು ಹೆಣ್ಣುಮಕ್ಕಳಲ್ಲಿ ಅವರು ಅವರಲ್ಲಿ ಒಬ್ಬರಂತೆ ಬೆರತಿಕೊಂಡರು. ಮತ್ತು ಕಳೆದ ಇಪ್ಪತ್ತು ವರ್ಷಗಳಲ್ಲಿ ಅವರು ಖಾದಿಯಾನ್‌ಗೆ ಹಿಂದಿರುಗಿದ ನಂತರವೂ ಅವರ ನಿಧನದ ತನಕ, ಅವರು ಇನ್ನೂ ಕಬಾಬೀರಿನ ಮಹಿಳೆಯರೊಂದಿಗೆ ಸಂಬಂಧವನ್ನು ಹೊಂದಿದ್ದರು ಮತ್ತು ಅಲ್ಲಿ ಅವರು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅತಿಥಿಗಳನ್ನು ನೋಡಿಕೊಳ್ಳುತ್ತಿದ್ದರು. ಆತಿಥ್ಯವು ಒಂದು ವಿಶೇಷ ಗುಣವಾಗಿತ್ತು, ಅಂತೆಯೇ, ಜಮಾಅತಿನ ಕೇಂದ್ರದ ಸ್ವಚ್ಛತೆಯ ಬಗ್ಗೆ ಹೆಚ್ಚಿನ ಗಮನವನ್ನು ನೀಡುತ್ತಿದ್ದರು. ದಿವಂಗತರು ಒಬ್ಬಳು ಪುತ್ರಿ ಮತ್ತು ಇಬ್ಬರು ಪುತ್ರರನ್ನು ಅಗಲಿರುವರು. ಅವರ ಒಬ್ಬ ಪುತ್ರನಾದ ಅತಾಉಲ್ ಮಜೀದ್ ಮುಬಶ್ಶಿರ್ ಕೌಸರ್ ಎಂ.ಟಿ.ಎ. ಅಲ್‌ಅರೇಬಿಯ ಯು.ಕೆ.ಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಪುತ್ರಿಯಾದ ಬುಶ್ರಾ ಕೌಸರ್ ಸಾಹಿಬ ಡಾಕ್ಟರ್ ಐಮನ್ ಓದೆಯರ ಪತ್ನಿಯಾಗಿದ್ದಾರೆ. ಅವರು ಲಜ್ನಾ ಇಮಾಇಲ್ಲಾಹ್ ಹಾಲೇಂಡ್‌ನಲ್ಲಿ ನೇಶನಲ್ ಸೆಕ್ರಟರಿ ಖಿದ್‌ಮತೇ ಖಲ್‌ಕ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಕಿರಿಯ ಪುತ್ರನಾದ ಶರೀಫ್ ಕೌಸರ್ ಖಾದಿಯಾನಿನಲ್ಲಿ ಜಮಾಅತಿನ ಮುರಬ್ಬಿ, ಖುದ್ದಾಮುಲ್ ಅಹ್ಮದಿಯಾದ ನಾಯಿಬ್ ಸದರ್ ಮತ್ತು ಆಡಿಯೋ ವೀಡಿಯೋ ವಿಭಾಗದ ಎಡಿಶನಲ್ ಇನ್‌ಚಾರ್ಜ್ ಆಗಿರುವರು. ಅಲ್ಲಾಹನು ದಿವಂಗತರೊಂದಿಗೆ ಮಗ್‌ಫಿರತ್ ಮತ್ತು ಕಾರುಣ್ಯದಿಂದ ವರ್ತಿಸಲಿ ಮತ್ತು ಅವರ ಒಳಿತುಗಳನ್ನು ಮಕ್ಕಳಲ್ಲೂ ಜಾರಿಯಲ್ಲಿರಿಸಲಿ.

ಎರಡನೆಯ ಉಲ್ಲೇಖವೆಂದರೆ ನೂರುಲ್ ಹಕ್ ಮಝ್‌ಹರ್ ಸಾಹಿಬ್ ಅವರದ್ದಾಗಿದೆ. ಅವರು ತಾಂಜಾನಿಯಾದ ರಾಫಿಬ್ ಜಿಯಾವುಲ್ ಹಕ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಅವರ ತಂದೆಯಾಗಿದ್ದರು. ಅವರು ಲಾಹೋರ್‌ನಿಂದ ಬಂದವರು. ಅವರು ಇತ್ತೀಚಿನ ದಿನಗಳಲ್ಲಿ ನಿಧನರಾದರು. **ಇನ್ನಾ ಲಿಲ್ಲಾಹಿ ವ ಇನ್ನಾ ಇಲೈಹಿ ರಾಜಿಊನ್**. ಅಲ್ಲಾಹನ ಕೃಪೆಯಿಂದ ಅವರು ಮೂಸಿಯಾಗಿದ್ದರು.

ರಾಫಿಬ್ ಝಿಯಾ-ಉಲ್-ಹಕ್ ಸಾಹಿಬ್ ಬರೆಯುತ್ತಾರೆ: ಅವರ ಕುಟುಂಬದಲ್ಲಿ ಅಹ್ಮದಿಯತ್ ಅವರ ಅಜ್ಜ ಮುನ್ಷಿ ಮುಹಮ್ಮದ್ ದೀನ್ ಸಾಹಿಬ್ ಅವರಿಂದ ಬಂದಿತ್ತು, ಅವರು 1905 ರಲ್ಲಿ ತಮ್ಮ ಚಿಕ್ಕಪ್ಪನೊಂದಿಗೆ ಬೈಅತ್ ಮಾಡುವ ಉತ್ಸಾಹದಿಂದ ಖಾದಿಯಾನ್‌ಗೆ ಬಂದರು. ಹಝ್ರತ್ ಮಸೀಹ್ ಮೌಊದ್ ಅಳಯಹಿಸ್ಸಲಾಮ್ ಅವರ ಹಿಂದೆ ನಮಾಝ್ ನಿರ್ವಹಿಸುವ ಸೌಭಾಗ್ಯವು ಅವರಿಗೆ ಲಭಿಸಿದೆ. ಬೈಅತ್ ಮಾಡಲು ವಿನಂತಿಸಿಕೊಳ್ಳಲಾಯಿತು ಆದರೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರು ಅಸ್ವಸ್ಥರಾಗಿದ್ದಾರೆ ಎಂದು ಘೋಷಿಸಲಾಯಿತು. ಬೈಅತ್ ಆಗಲಿಲ್ಲ. ಆದಿನ ಯಾವುದೇ ಬೈಅತ್ ಆಗಲಿಲ್ಲ. ಅವರು ಹಿಂತಿರುಗಿ ಬಂದು ಹಝ್ರತ್ ಖಲೀಫತುಲ್ ಮಸೀಹ್ ಅಲ್-ಅವ್ವಲ್(ರ) ಅವರ ಬೈಅತ್ ಮಾಡಿದರು. 1974ರಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿದ್ದರು. ವಿರೋಧಿಗಳು ಆ ಮನೆಗೆ ಬೆಂಕಿ ಹಚ್ಚಿದರು. ಮನೆಯ ಎಲ್ಲಾ ಪೀಠೋಪಕರಣಗಳು ಸುಟ್ಟು ಭಸ್ಮವಾಯಿತು. ಯಾರೂ ಸಹ ಆಶ್ರಯ ನೀಡಲಿಲ್ಲ. ಆಗ ಒಬ್ಬ ಅಹ್ಮದಿ ತನ್ನ ಮನೆಯಲ್ಲಿ ಆಶ್ರಯ ನೀಡಿದರು. ಅವರು ಹೇಳುತ್ತಾರೆ: ನನ್ನ ತಂದೆಯು ಈ ಚಿಕ್ಕ ಮನೆಯಲ್ಲಿ ಬಹಳ ತಾಳ್ಮೆ ಮತ್ತು ಕೃತಜ್ಞತೆಯಿಂದ ವಾಸಿಸುತ್ತಿದ್ದರು. ಅವರ ನಾಲಿಗೆಯ ಮೇಲೆ ಯಾವತ್ತೂ ಯಾರನ್ನೂ ದೂರಲಿಲ್ಲ ಮತ್ತು ಎಲ್ಲವೂ ಸುಟ್ಟುಹೋಗಿದೆ ಎಂದೂ ಹೇಳಲಿಲ್ಲ, ಸ್ವಲ್ಪ ಸಮಯದ ನಂತರ ಸರ್ವಶಕ್ತನಾದ ಅಲ್ಲಾಹನು ಅವರಿಗೆ ಸ್ವಂತ ಮನೆ ಕಟ್ಟಲು ಅವಕಾಶ ಮಾಡಿಕೊಟ್ಟನು ಮತ್ತು ಇದು 1974 ರ ತ್ಯಾಗದ ಪ್ರತಿಫಲ ಎಂದು ಅವರು ಹೇಳುತ್ತಿದ್ದರು. 1974 ರಲ್ಲಿ, ಮೊಘಲ್ಪುರ ಮಸೀದಿಯನ್ನು ರಕ್ಷಿಸುವಾಗ, ಅಹಮದಿಯೇತರ ಸ್ನೇಹಿತರು ಮಸೀದಿಯ ಮೇಲೆ ದಾಳಿ ಮಾಡಿದರು. ಅವರ ತಲೆಯ ಮೇಲೆ ಕಬ್ಬಿಣದ ರಾಡ್ ಹೊಡೆದು ಗಾಯಗೊಳಿಸಿದರು ಮತ್ತು ಅದರ ಗುರುತು ಅವರ ಇಡೀ ಜೀವನಮಾನದಲ್ಲಿ ಅವರ ತಲೆಯ ಮೇಲೆ ಉಳಿಯಿತು. ಅವರು ಹೇಳುತ್ತಾರೆ: ನಾನು ನನ್ನ ತಂದೆ ತಹಜ್ಜುದ್‌ನಲ್ಲಿ ಅಳುವುದನ್ನು ಯಾವಾಗಲೂ ನೋಡಿದ್ದೇನೆ ಮತ್ತು ಮನೆಯಲ್ಲಿ ಪ್ರಾರ್ಥನೆಯ ಮೇಲೆ ವಿಶೇಷ ಗಮನವಹಿಸುತ್ತಿದ್ದರು. ಅವರು ದಿನಕ್ಕೆ ಐದು ಬಾರಿ ನಮಾಝಿನ ಇಮಾಮತ್ ಅನ್ನು ಮಾಡುತ್ತಿದ್ದರು. ಅವರು ಪವಿತ್ರ ಖುರ್‌ಆನ್ ಪಠಿಸಲು ಮತ್ತು ನಮಾಝು ನಿರ್ವಹಿಸಲು ಕುಟುಂಬದ ಸದಸ್ಯರನ್ನು ಉತ್ತೇಜಿಸುತ್ತಿದ್ದರು. ಒಮ್ಮೆ ಸ್ಥಳೀಯ ಮಸೀದಿಯ ಮೌಲ್ವಿ ಈ ಅಹ್ಮದೀಯರ ಖುರ್‌ಆನ್ ಬೇರೆಯಾಗಿದೆ, ನಮಾಝನ್ನು ಬೇರೆ ರೀತಿಯಲ್ಲಿ ನಿರ್ವಹಿಸುತ್ತಾರೆ ಎಂದು ಭಾಷಣ ಮಾಡಿದನು. ಅಷ್ಟರಲ್ಲಿ ನಮ್ಮ ನೆರೆಯ ಅಹ್ಮದೀಯೇತರನು ಮಸೀದಿಯಲ್ಲಿ ಎದ್ದುನಿಂತು ಹೇಳಿದನು: ಮೌಲ್ವಿ ಸಾಹಿಬ್! ಇಡೀ ಬೀದಿಯಲ್ಲಿ ಒಂದೇ ಒಂದು ಮನೆಯಲ್ಲಿ ಖುರ್‌ಆನ್ ಪಠಣದ ಸದ್ದು ಕೇಳಿಸುತ್ತದೆ ಮತ್ತು ಅದು ನೂರುಲ್ ಹಕ್ ಅವರ ಮನೆಯಾಗಿದೆ ಮತ್ತು ನಾವು ಓದಿದ ಅದೇ ಖುರ್‌ಆನ್ ಅನ್ನು ಅವರು ಸಹ ಓದುತ್ತಿದ್ದಾರೆ ಆದ್ದರಿಂದ ನೀವು ಹೀಗೆ ಸುಳ್ಳು ಹೇಳಬೇಡಿ. ಪ್ರಸ್ತುತ ಕಾಲದಲ್ಲಿ ಮೌಲ್ವಿಯ ಭಯ ಎಷ್ಟರಮಟ್ಟಿಗಿದೆ ಎಂದರೆ ಇದನ್ನು ಯಾರೂ ಹೇಳಲಾರರು. ಆದಾಗ್ಯೂ, ಅವರು ತಮ್ಮ ನೆರೆಹೊರೆಯಲ್ಲಿ ತುಂಬಾ ಕರುಣಾಳು ಮತ್ತು ಸೌಮ್ಯವಾಗಿ ಪ್ರಸಿದ್ಧರಾಗಿದ್ದರು. ಕೊನೆಯ ಅನಾರೋಗ್ಯದಲ್ಲಿಯೂ ಅಹಮದೀಯರಲ್ಲದ ಉಗ್ರ ವಿರೋಧಿಗಳೂ ನಿಮ್ಮ ಮನೆಗೆ ಬಂದು ನಿಮ್ಮ ಸ್ಥಿತಿಯನ್ನು ವಿಚಾರಿಸಲು ಬರುತ್ತಿದ್ದರು. ಅವರು ಬಹಳ ಉದಾರ ಮತ್ತು ಬಡವ-ಪ್ರೀತಿ ಹೊಂದಿದ್ದರು. ಯಾರಿಗೂ ಹೇಳದೆ ನಿರ್ಗತಿಕರಿಗೆ ಪಡಿತರ ಕಳುಹಿಸುತ್ತಿದ್ದರು. ಅವರು ಒಬ್ಬ ಪುತ್ರ ಮತ್ತು ಮೂವರು ಪುತ್ರಿಯರನ್ನು ಅಗಲಿದ್ದಾರೆ. ಓರ್ವ ಪುತ್ರಿ ಅಮತುಲ್ ಮತೀನ್ ಅಲೀಮ್ ಮಹಮೂದ್ ಸಾಹಿಬರ ಮುರಬ್ಬಿ ಸಿಲ್‌ಸಿಲಾ ಅವರ ಪತ್ನಿಯಾಗಿದ್ದಾರೆ. ಘಾನಾದಲ್ಲಿದ್ದ ಕಾರಣ ಅವರಿಗೂ ಜನಾಜದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ. ನಿಧನದ ಸಮಯದಲ್ಲಿ ಅವರು ಜೊತೆ ಇರಲಿಲ್ಲ. ಪುತ್ರ ರಾಫಿಬ್ ಜಿಯಾ-ಉಲ್-ಹಕ್ ತಾಂಜಾನಿಯಾದಲ್ಲಿ ಮುರಬ್ಬಿಯಾಗಿದ್ದು, ಅಲ್ಲಿ ಸೇವೆ ಸಲ್ಲಿಸುವ ಅವಕಾಶವನ್ನು ಪಡೆಯುತ್ತಿದ್ದಾರೆ. ಅಲ್ಲಾಹನು ಮೃತರಿಗೆ ಕ್ಷಮೆ ಮತ್ತು ಕರುಣೆಯನ್ನು ನೀಡಲಿ ಮತ್ತು ಅವರೆಲ್ಲರಿಗೂ ತಾಳ್ಮೆ ಮತ್ತು ಧೈರ್ಯವನ್ನು ನೀಡಲಿ.

ಮುಂದಿನ ಉಲ್ಲೇಖ ಅಮತುಲ್ ಹಫೀಝ್ ನಿಗ್‌ಹತ್ ಸಾಹಿಬಾ ಅವರದ್ದಾಗಿದೆ. ಅವರು ದಿ॥ ಮುಹಮ್ಮದ್ ಶಫೀ ಸಾಹಿಬ್ ರಬ್ವಾ ಅವರ ಪತ್ನಿಯಾಗಿದ್ದರು. ಕಳೆದ ಕೆಲವು ದಿನಗಳ ಮುಂಚೆ ಅವರು ನಿಧನ ಹೊಂದಿದ್ದಾರೆ. ಮೃತರು ಮುಸಿಯಾ ಆಗಿದ್ದರು ಮತ್ತು ಮುಬಾರಕ್

ತನ್ವೀರ್ ಸಾಹಿಬ್ ಮುರಬ್ಬಿ ಸಿಲ್‌ಸಿಲಾ ಜರ್ಮನಿಯ ಅತ್ತೆಯಾಗಿದ್ದರು. ಅವರ ಪುತ್ರಿ ಅಮತುಲ್ ಜಮೀಲ್ ಗ಼ಝಾಲಾ, ಅವರು ಜರ್ಮನಿಯ ಉಪಾಧ್ಯಕ್ಷರೂ ಆಗಿದ್ದಾರೆ. ಅಮತುಲ್ ಜಮೀಲ್ ಸಾಹಿಬಾ ಬರೆಯುತ್ತಾರೆ: ನನ್ನ ತಾಯಿ ಉನ್ನತ ಗುಣಲಕ್ಷಣಗಳನ್ನು ಹೊಂದಿರುವ ಸದ್ಗುಣಶೀಲ ವ್ಯಕ್ತಿಯಾಗಿದ್ದರು. ಯಾರಾದರೂ ದುಆಗಾಗಿ ವಿನಂತಿಸಿಕೊಂಡರೆ, ಅವರು ಅದನ್ನು ತಮ್ಮ ಮೇಲೆ ಕಡ್ಡಾಯವೆಂದು ಪರಿಗಣಿಸುತ್ತಿದ್ದರು ಮತ್ತು ಸಂಪೂರ್ಣ ಕಾಳಜಿ ಮತ್ತು ಪ್ರೀತಿಯಿಂದ ಅವರಿಗಾಗಿ ಪ್ರಾರ್ಥಿಸುತ್ತಿದ್ದರು. ಖಿಲಾಫತ್‌ನೊಂದಿಗೆ ಅಪಾರ ಪ್ರೀತಿಯ ಸಂಬಂಧ ಹೊಂದಿದ್ದರು. ಮಕ್ಕಳಿಗೂ ಅದನ್ನೇ ಬೋಧಿಸುತ್ತಿದ್ದರು. ಅವರು ಜಮಾಅತ್ತಿನ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದರು ಮತ್ತು ಧರ್ಮದ ಸೇವೆಯೇ ನಿಜವಾದ ಬಂಡವಾಳ ಎಂದು ಪ್ರಾಯೋಗಿಕವಾಗಿ ನಮಗೆ ಬೋಧಿಸಿದರು. ಲಜ್ನಾಇಮಾಅಲ್ಲಾಹ್‌ದ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. ಅವರು ತಬ್ಲೀಗ್ ಮಾಡುವುದರಲ್ಲಿ ಉತ್ಸುಕರಗಿದ್ದರು. ಅವರು ದೂರದ ಪ್ರದೇಶಗಳಿಗೆ ತಬ್ಲೀಗ್‌ಗಾಗಿ ಕಾಲ್ನಡಿಗೆಯಲ್ಲಿ ಹೋಗುತ್ತಿದ್ದರು. ಎಲ್ಲಿಯವರೆಗೆ ಅಲ್ಲಿ ತಬ್ಲೀಗ್ ಮಾಡುವುದನ್ನು ಅನುಮತಿಸಲಾಗಿತ್ತೋ ಅಲ್ಲಿಯವರೆಗೆ ತಬ್ಲೀಗ್ ಮಾಡುತ್ತಿದ್ದರು ಆ ಹೆಚ್ಚಿನ ವಿರೋಧವಿರಲಿಲ್ಲ. ಆ ಸಮಯದಲ್ಲಿ, ಹೆಚ್ಚಿನ ಮೊಕದ್ದಮೆಗಳು ಇರಲಿಲ್ಲ. ವೈದ್ಯಕೀಯ ಶಿಬಿರಗಳನ್ನು ಏರ್ಪಡಿಸಿ ಹೋಮಿಯೋಪತಿ ಔಷಧಗಳನ್ನು ವಿತರಿಸುತ್ತಿದ್ದರು. ಅವರ ಪ್ರಯತ್ನದ ಫಲವಾಗಿ ಅಲ್ಲಾಹನು ಅವರಿಗೆ ಸುಮಾರು ಐವತ್ತು ಹಣ್ಣುಗಳನ್ನು ಕೊಟ್ಟನು. ಅಂದರೆ, 50 ಜನರಿಗೆ ಬೈಅತ್ ಮಾಡುವ ಅವಕಾಶ ಅವರಿಗೆ ಲಭಿಸಿತು. ಲೌಕಿಕವಾಗಿ ಹೇಳುವುದಾದರೆ ಶಿಕ್ಷಣ ಕಡಿಮೆಯಾದರೂ ಜ್ಞಾನ ಸಂಪಾದನೆಯಲ್ಲಿ ಒಲವು ಹೊಂದಿದ್ದರು. ಧಾರ್ಮಿಕ ಪುಸ್ತಕಗಳನ್ನು ಓದಿದ ನಂತರ, ಅವರು ಬಹಳ ಸಾಕ್ಷ್ಯಾಧಾರವಾಗಿ ಮಾತನಾಡುತ್ತಿದ್ದರು ಮತ್ತು ಪ್ರತಿಯೊಬ್ಬ ವ್ಯಕ್ತಿಯ ಮಾನಸಿಕ ಗುಣಮಟ್ಟಕ್ಕೆ ಅನುಗುಣವಾಗಿ ಮಾತನಾಡುತ್ತಿದ್ದರು. ಮಹಿಳೆಯರಿಗೆ ಕೇಳುವ ಬದಲು ಉದ್ಯೋಗ ಪಡೆಯಲು ಪ್ರಯತ್ನಿಸುವಂತೆ ಯಾವಾಗಲೂ ಹೇಳುತ್ತಿದ್ದರು. ಅವರು ತಮ್ಮ ಮನೆಯಲ್ಲಿ ವಿವಿಧ ಬಡ ಹೆಣ್ಣುಮಕ್ಕಳನ್ನು ಇಟ್ಟುಕೊಂಡು ಅವರಿಗೆ ಶಿಕ್ಷಣವನ್ನು ನೀಡಿದರು ಮತ್ತು ನಂತರ ಅವರ ಮದುವೆಯ ವೆಚ್ಚವನ್ನು ಸ್ವಇಚ್ಛೆಯಿಂದ ಭರಿಸಿದರು ಮತ್ತು ಯಾವಾಗಲೂ ಅವರನ್ನು ಚೆನ್ನಾಗಿ ನಡೆಸಿಕೊಳ್ಳುತ್ತಿದ್ದರು. ಗ಼ಝಾಲಾ ಸಾಹಿಬಾ ಹೇಳುತ್ತಾರೆ: ನಾನು ಅವರನ್ನು ಭೇಟಿಯಾಗಲು ಹೋದಾಗ ನೀನು ವಾಖಿಫೆ ಝಿಂದಗಿಯಾಗಿರುವೆ ಹಾಗಾಗಿ ನಿನ್ನನ್ನು ತಡೆಯುವುದಿಲ್ಲ ಎಂದು ಹೇಳಿದರು. ನೀನು ನಿಮ್ಮ ರಜೆದಿನಗಳನ್ನು ಪೂರ್ಣಗೊಳಿಸಿ ಹಿಂದಿರುಗು. ಅವರು ಇಬ್ಬರು ಪುತ್ರರು ಮತ್ತು ಇಬ್ಬರು ಪುತ್ರಿಯರು ಮತ್ತು ಅನೇಕ ಮೊಮ್ಮಕ್ಕಳು ಮತ್ತು ಮೊಮ್ಮಕ್ಕಳನ್ನು ಅಗಲಿದ್ದಾರೆ, ಅವರೆಲ್ಲರೂ ಒಂದಲ್ಲ ಒಂದು ರೂಪದಲ್ಲಿ ಜಮಾಅತ್‌ನ ಸೇವೆ ಸಲ್ಲಿಸುತ್ತಿದ್ದಾರೆ. ಅವರು ತಮ್ಮ ಮನೆಯಲ್ಲಿ ಉತ್ತಮ ವಾತಾವರಣವನ್ನು ಸೃಷ್ಟಿಸಿದ್ದಾರೆ. ಅಲ್ಲಾಹನ ಕೃಪೆಯಿಂದ ಇಬ್ಬರು ಅಳಿಯಂದಿರಿಗೂ ಜಮಾಅತ್ತಿನ ಸೇವೆ ಮಾಡುವ ಸೌಭಾಗ್ಯ ಪಡೆಯುತ್ತಿದ್ದಾರೆ. ಸರ್ವಶಕ್ತನಾದ ಅಲ್ಲಾಹನು ಅವರನ್ನು ಕ್ಷಮಿಸಲಿ ಮತ್ತು ಕರುಣಿಸಲಿ ಮತ್ತು ಮುಂದಿನ ಪೀಳಿಗೆಯಲ್ಲಿ ಅವರ ಒಳ್ಳೆಯ ಕಾರ್ಯಗಳನ್ನು ಮುಂದುವರಿಸಲಿ.

**(ಅಲ್–ಫ಼ಝಲ್ ಇಂಟರ್‌ನ್ಯಾಶನಲ್, ಆಗಸ್ಟ್ 9, 2024, ಪುಟ 2–6)**

***129 ನೇ ಜಲ್ಸಾ ಸಾಲಾನ ಖಾದಿಯಾನ್***
***27, 28, 29 ಡಿಸೆಂಬರ್ 2024ರಂದು ಆಯೋಜಿಸಲಾಗುವುದು***

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 129ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 27, 28 ಮತ್ತು 29ನೇ ಡಿಸೆಂಬರ್ 2024 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್**.

**(ನಾಝಿರ್ ಇಸ್ಲಾಹ್–ವ–ಇರ್‌ಶಾದ್ ಖಾದಿಯಾನ್)**

## ವಿಶೇಷ ಪ್ರಾರ್ಥನೆಗಳಿಗಾಗಿ ಮನವಿ

ಹಝ್ರ್‌ರತ್ ಖ಼ಲೀಫತುಲ್ ಮಸೀಹ್ ಸಾಲಿಸ್(ರಹ್ಮಹುಲ್ಲಾಹ್) ಕಂಡ ಒಂದು ಕನಸಿನ ಆಧಾರದಲ್ಲಿ ಅಮೀರುಲ್ ಮುಅ್‌ಮಿನೀನ್ ಹಝ್ರ್‌ರತ್ ಮಿರ್ಝಾ ಮಸ್ರೂರ್ ಅಹ್ಮದ್ ಖ಼ಲೀಫತುಲ್ ಮಸೀಹ್ ಖಾಮಿಸ್(ಅಯ್ಯದಹುಲ್ಲಾಹ್) ಜಮಾಅತ್ ಬಾಂಧವರಿಗೆ ವಿಶೇಷ ಪ್ರಾರ್ಥನೆಗಳನ್ನು ಮಾಡಲು ಮನವಿ ಮಾಡುತ್ತಾ ಹೀಗೆ ಹೇಳಿದರು: ಜಮಾಅತ್ ಬಾಂಧವರು ಈ ಕೆಳಗಿನ ಪ್ರಾರ್ಥನೆಗಳನ್ನು ಮಾಡುತ್ತಾ ಇರುವುದಾದರೆ ಶೈತಾನನು ಎಂದಿಗೂ ಪ್ರವೇಶಿಸಲು ಸಾಧ್ಯವಾಗದಂತಹ ಒಂದು ಸುದೃಢ ಕೋಟೆಯಲ್ಲಿ ಅವರು ಸುರಕ್ಷಿತರಾಗುವರು. ಆ ಕೋಟೆಯ ಗೋಡೆಗಳು ಕಬ್ಬಿಣದ್ದಾಗಿವೆ ಮತ್ತು ಅದು ಆಕಾಶದ ವರೆಗೆ ತಲುಪಿವೆ. ಆದ್ದರಿಂದ ನುಸುಳಿ ಬಂದು ಆಕ್ರಮಣ ಮಾಡಲು ಶೈತಾನನಿಗೆ ಯಾವ ಮಾರ್ಗವೂ ಇರುವುದಿಲ್ಲ.

**ಸುಬ್‌ಹಾನಲ್ಲಾಹಿ ವಬಿಹಮ್ದಿಹಿ ಸುಬ್‌ಹಾನಲ್ಲಾಹಿಲ್ ಅಝೀಮ್ – ಅಲ್ಲಾಹುಮ್ಮ ಸಲ್ಲಿ ಅಲಾ ಮುಹಮ್ಮದಿನ್ ವ ಆಲಿ ಮುಹಮ್ಮದ್**.

ಜಮಾಅತಿನ ಪ್ರತಿಯೊಬ್ಬ ಹಿರಿಯ ಸದಸ್ಯರು ದಿನನಿತ್ಯ ಈ ಪ್ರಾರ್ಥನೆಯನ್ನು 200 ಬಾರಿ ಪಠಿಸಬೇಕು.
15 ರಿಂದ 25 ವಯಸ್ಸಿನ ಸದಸ್ಯರು ಇದನ್ನು ದಿನನಿತ್ಯ ಕನಿಷ್ಠ 100 ಬಾರಿ ಪಠಿಸಬೇಕು.
ಮಕ್ಕಳು ಕನಿಷ್ಠ 33 ಬಾರಿ ದಿನನಿತ್ಯ ಇದನ್ನು ಪಠಿಸಬೇಕು.
ಚಿಕ್ಕ ಮಕ್ಕಳಿಗೆ ಹೆತ್ತವರು 3–4 ಬಾರಿ ಹೇಳಿಕೊಡಬೇಕು.

2ನೇ ಪ್ರಾರ್ಥನೆ: ಇಸ್ತಿಗ಼್ಫಾರ್

**ಅಸ್ತಗ಼್ಫಿರುಲ್ಲಾಹ ರಬ್ಬೀ ಮಿನ್ ಕುಲ್ಲಿ ಧ಼ಂಬಿನ್ ವ ಅತೂಬು ಇಲೈಹಿ.**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: ನಾನು ಈ ಪ್ರಾರ್ಥನೆಯನ್ನು ಸಹ ಇದರಲ್ಲಿ ಸೇರಿಸುತಿದ್ದೇನೆ.

3ನೇ ಪ್ರಾರ್ಥನೆ:

**ರಬ್ಬಿ ಕುಲ್ಲು ಶೈಇನ್ ಖಾ಼ದಿಮುಕ ರಬ್ಬಿ ಫಹ್‌ಫಝ್‌಼ನೀ ವನ್‌ಸುರ್‌ನೀ ವರ್‌ಹಮ್‌ನೀ**

100 ಬಾರಿ ದಿನನಿತ್ಯ ಪಠಿಸಬೇಕು.

ಹುಝೂರ್(ಅಯ್ಯದಹುಲ್ಲಾಹ್) ಹೇಳಿದರು: "ಇತ್ತೀಚಿನ ದಿನಗಳಲ್ಲಿ ಶೈತಾನನು ನಾನಾ ರೀತಿಯಲ್ಲಿ ಜಮಾಅತಿನ ಮೇಲೂ ಮತ್ತು ಸಾಮೂಹಿಕ ನೆಲೆಯಲ್ಲೂ ನಮ್ಮ ಮೇಲೆ ಆಕ್ರಮಣ ಮಾಡಲು ಹವಣಿಸುತಿದ್ದಾನೆ. ಈ ಲೋಕದಲ್ಲಿ ಶೈತಾನನ ಆಕ್ರಮಣಗಳಿಂದ ರಕ್ಷಣೆ ಪಡೆಯಲು ಇರುವ ಒಂದೇ ಮಾರ್ಗವೇನೆಂದರೆ, ವಿಶೇಷವಾಗಿ ಪ್ರಾರ್ಥನೆಗಳಿಗೆ ಒತ್ತು ನೀಡುವುದಾಗಿದೆ. ಜಲ್ಸದ ದಿನಗಳಲ್ಲಿ ಮಾತ್ರವಲ್ಲ, ಬದಲಾಗಿ ಯಾವಾಗಲೂ ದುರೂದ್ ಪ್ರಾರ್ಥನೆ, ದೇವಸ್ಮರಣೆ ಮತ್ತು ಮೇಲಿನ ಪ್ರಾರ್ಥನೆಗಳನ್ನು ತಮ್ಮ ಜೀವಿತದ ಭಾಗವನ್ನಾಗಿ ಮಾಡಿಕೊಳ್ಳಬೇಕು ಮತ್ತು ಮಕ್ಕಳು, ಹಿರಿಯರು, ಸ್ತ್ರೀಯರು, ಪುರುಷರು ಪ್ರತಿಯೊಬ್ಬರು ಇದರ ಕಡೆಗೆ ಗಮನ ಕೊಡಬೇಕು. **(ಖುತ್ಬ ಜುಮುಅ 23 ಆಗಸ್ಟ್, 2024)**


**"ಮೇಲಿನ ಕೈ ಕೆಳಗಿನ ಕೈಗಿಂತ ಉತ್ತಮವಾಗಿದೆ. (ಎಂದರೆ ಧಾನಧರ್ಮ ಕೊಡುವವನು ಅದನ್ನು ಪಡೆದುಕೊಳ್ಳುವವನಿಗಿಂತ ಉತ್ತಮವಾಗಿದ್ದಾನೆ)"**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**M.B. Nasir Ahmed & Family, Bengaluru, Karnataka**

**"ಯಾರು ಜನರಿಗೆ ಕೃತಜ್ಞತೆ ಸಲ್ಲಿಸುವುದಿಲ್ಲವೋ ಅವನು ಅಲ್ಲಾಹನಿಗೂ ಕೃತಜ್ಞತೆ ಸಲ್ಲಿಸುವುದಿಲ್ಲ."**
(ಹಝ್ರತ್ ಪೈಗಂಬರ್ ಸಲ್ಲಲ್ಲಾಹು ಅಲೈಹಿವ ಸಲ್ಲಮ್)

**ದುಆವಿನ ಆಕಾಂಕ್ಷಿ:**
**Mubarak Ahmed Naseem & Family, Shimoga, Karnataka**

EDITOR
TARIQ AHMED IDRIS.
Mobile : +91 9902678609
e-mail: kannadabadar@gmail.com
website:www.akhbarbadr.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613
Weekly **BADAR** Qadian
Distt: Gurdaspur (Pb.) INDIA Qadian - 143516
Postal Reg. No: 3000039689/2023-25 Vol No.05, Thursday, 05 September 2024, Issue No. 36

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION: Rs.600/- (Per Issue: 10/- ) (WEIGHT: 20-50, grms / issue)

# ಸೈಯಿದುನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅತಬಿಅ)ರವರ ಜರ್ಮನಿಯ ಪ್ರವಾಸ ಆಗಸ್ಟ್, ಸೆಪ್ಟೆಂಬರ್ 2023

*(ಬದರ್ ಸಂಚಿಕೆ-35ರ ಉಳಿದ ಭಾಗ ಮುಂದುವರಿಸಲಾಗಿದೆ)*

**ಹುಝೂರೆ ಅನ್ವರ್(ಅಬಿಅ) ರವರ ಸಂಬೋಧನೆ**

ತಶಹ್ಹುದ್ ತವ್ವೂಝ್ ಮತ್ತು ತಸ್ಮಿಯ ನಂತರ ಹುಝೂರೆ ಅನ್ವರ್(ಅಬಿಅ) ಹೇಳಿದರು:

ಎಲ್ಲಾ ಗೌರವಾನ್ವಿತ ಅತಿಥಿ ಮಹೋದಯರಿಗೆ, ಅಸ್ಸಲಾಮು ಅಲೈಕುಂ ರಹಮತುಲ್ಲಾಹಿ ವ ಬರಕಾತುಹು!

ಅಲ್ಲಾಹನ ಕೃಪೆಯಿಂದೆ. ಇಷ್ಟೊಂದು ದೀರ್ಘ ಅವಧಿಯ ನಂತರ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಈ ನಗರದಲ್ಲಿ ಮಸೀದಿ ನಿರ್ಮಾಣದ ಭಾಗ್ಯ ದೊರೆತಿದೆ. ಆದ್ದರಿಂದ ಈ ನಗರದ ಮೇಯರ್, ಕೌನ್ಸಿಲರ್ಸ್ ಮತ್ತು ನಾಗರಿಕರೆಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ. ಅವರು ಮಸೀದಿ ನಿರ್ಮಾಣ ಕಾರ್ಯದಲ್ಲಿ ನಮಗೆ ನೆರವು ನೀಡಿದರು.

ಈ ಕೃತಜ್ಞತೆ ನಾಮಮಾತ್ರಕ್ಕೆ ಮಾತ್ರವಲ್ಲ. ಬದಲು ಇದು ನಮ್ಮ ಧಾರ್ಮಿಕ ಕರ್ತವ್ಯವಾಗಿದೆ. ಇಸ್ಲಾಮಿನ ಈ ಆದೇಶವಿದೆ. ಇಸ್ಲಾಂ ಧರ್ಮ ಸ್ಥಾಪಕರಾದ ಹಝ್ರತ್ ಮುಹಮ್ಮದ್ ಮುಸ್ತಫಾ(ಸ) ಹೇಳಿದರು. ನೀವು ಜನರಿಗೆ ಕೃತಜ್ಞರಾಗಿರುವುದಿಲ್ಲ ಎಂದರೆ ಅಲ್ಲಾಹನಿಗೂ ಕೃತಜ್ಞರಾಗಿರಲು ಸಾಧ್ಯವಿಲ್ಲ. ಆದ್ದರಿಂದ ಒಂದು ಲೆಕ್ಕದಲ್ಲಿ ಇದು ನಮ್ಮ ಧಾರ್ಮಿಕ ಕರ್ತವ್ಯವು ಆಗಿದೆ. ನಾವು ನಿಮಗೆ ಕೃತಜ್ಞತೆಯನ್ನು ಸಲ್ಲಿಸುತ್ತಿದ್ದೆವು. ನೀವು ನಮ್ಮ ಕಾರ್ಯದಲ್ಲಿ ನೆರವಾಗಿದ್ದೀರಿ. ಇಂದು ಅಲ್ಲಾಹನ ಅನುಗ್ರಹದಿಂದ ಅಹ್ಮದಿಯಾ ಮುಸ್ಲಿಂ ಜಮಾಅತಿಗೆ ಈ ನಗರದಲ್ಲಿ ಒಂದು ಚಿಕ್ಕದಾದ ಸುಂದರ ಮಸೀದಿ ಲಭ್ಯವಾಗಿದೆ.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಅಬ್ದುಲ್ಲ ಸಾಹಿಬ್ ಅಮಿರ್ ಜಮಾಅತ್ ಜರ್ಮನಿ ಅವರು ಈ ನಗರದ ಇತಿಹಾಸವನ್ನು ವಿವರಿಸುತ್ತಾ ಹೇಳಿದರು. ಈ ಮಸೀದಿ ನಗರದ ನಡು ಪ್ರದೇಶದಲ್ಲಿದೆ. ಇದು ತುಂಬಾ ಒಳ್ಳೆಯ ಮಾತಾಗಿದೆ. ಲೌಕಿಕ ಮತ್ತು ಭೌತಿಕ ವಸ್ತುಗಳಿಗಾಗಿ ಹೆಚ್ಚಿನ ಸವಲತ್ತುಗಳನ್ನು ಒದಗಿಸಿಕೊಡಲಾಗುತ್ತದೆ. ಅಲ್ಲೇ ಅಲ್ಲಾಹನ ಸ್ಮರಣೆ ಮಾಡಲು ಸಹ ಅನುಕೂಲಕರ ಸ್ಥಳ ಇರಬೇಕಾಗಿದೆ. ಅಲ್ಲಿ ಎಲ್ಲರೂ ಒಟ್ಟುಗೂಡಿ ಏಕದೇವನನ್ನು ಆರಾಧಿಸಬಹುದು. ಮಸೀದಿಯಾಗಲೀ, ಚರ್ಚ್ ಆಗಲಿ ಅಥವಾ ಅನ್ಯ ಧರ್ಮದ ಆರಾಧನ ಸ್ಥಳವಾಗಿರಲಿ, ಇವರೆಲ್ಲರೂ ಒಟ್ಟುಗೂಡುವಾಗ ತಿಳಿದುಬರುವುದು, ಧರ್ಮವು ಪರಸ್ಪರ ಸೇರಿ ಒಟ್ಟುಗೂಡುವ, ಮತ್ತು ಪರಸ್ಪರ ಸಹಕಾರ ನೀಡುವ ಶಿಕ್ಷಣ ಕೊಡುತ್ತದೆ. ಯಾವ ಧರ್ಮವು ಅಥವ ಯಾವ ಧರ್ಮದ ಸ್ಥಾಪಕರು ಆಗಲಿ ಉಗ್ರವಾದದ ಶಿಕ್ಷಣ ನೀಡುವುದಿಲ್ಲ. ಹಿಂಸಿಸುವ ಶಿಕ್ಷಣ ನೀಡುವುದಿಲ್ಲ. ಎಲ್ಲಾ ಪ್ರವಾದಿಗಳು ಅವರವರ ವಿಶ್ವಾಸ ಪ್ರಕಾರ ಅವರು ದೇವನ ಕಡೆ ಬಂದವರಾದರೆ ದೇವರು ಅವರನ್ನು ಆರಾಧಿಸಲು, ಒಬ್ಬರು ಮತ್ತೊಬ್ಬರ ಹಕ್ಕುಗಳನ್ನು ಪಾಲಿಸಲು ಗಮನ ನೀಡಿರುತ್ತಾನೆ. ಶಾಂತಿಮತ್ತು ಸೌಹಾರ್ಧತೆಯ ಶಿಕ್ಷಣ ನೀಡಿರುತ್ತಾನೆ. ಆದ್ದರಿಂದ ಈ ನಿಟ್ಟಿನಲ್ಲಿ ಇದೊಂದು ಒಳ್ಳೆಯ ಮಾತಾಗಿದೆ. ನಮಗೆ ಇಂಥದೊಂದು ಜಾಗದಲ್ಲಿ ಮಸೀದಿ ದೊರೆತಿದೆ. ಅದು ನಡು ನಗರದಲ್ಲಿದೆ, ಹೀಗೆ ಎಲ್ಲರ ನಡುವಿನಲ್ಲಿದ್ದು ನೆರೆಹೊರೆಯವರಿಗೆ ಇಸ್ಲಾಮಿನ ಸುಂದರವಾದ ಶಿಕ್ಷಣದ ಬಗ್ಗೆ ಮಾಹಿತಿ ನೀಡಬಹುದು, ತಪ್ಪು ಧಾರಣೆಗಳನ್ನು ಹೋಗಲಾಡಿಸಬಹುದು. ಏಕೆಂದರೆ ಈಗಿನ ಮುಸಲ್ಮಾನರು ಇಸ್ಲಾಮಿನ ಬಗ್ಗೆ ಬಹಳಷ್ಟು ತಪ್ಪು ಧಾರಣೆಗಳನ್ನು ಹುಟ್ಟು ಹಾಕಿದ್ದಾರೆ ಮತ್ತು ಬಹುಸಂಖ್ಯೆಯಲ್ಲಿ ಜನರು ಅದನ್ನೇ ನಂಬಿಕೊಂಡಿದ್ದಾರೆ. ಅದನ್ನು ನಾವು ಹೊಗಲಾಡಿಸುವೆವು ಮತ್ತು ಪವಿತ್ರ ಖುರ್ಆನ್ ಹಾಗೂ ಹಝ್ರತ್ ಮುಹ್ಮದ್ (ಸ) ರವರ ನಡವಳಿಕೆ ಮತ್ತು ಕೃತಿಯಿಂದ ಸಾಬೀತುಪಡಿಸುವೆವು. ಇಸ್ಲಾಮಿನ ನಿಜವಾದ ಶಿಕ್ಷಣ ಶಾಂತಿ, ಪ್ರೇಮ ಮತ್ತು ಸೌಹಾರ್ಧತೆಯಾಗಿದೆ.

ಹುಝೂರೆ ಅನ್ವರ್(ಅಬಿಅ) ಹೇಳಿದರು: ಮಸೀದಿಯ ಕುರಿತು ಪ್ರಾರಂಭದಲ್ಲಿ ಕೆಲವರು ವಿರೋಧಿಸಿದ್ದಾರೆ. ಅಮೀರ್ ಸಾಹೇಬರು ಹೇಳಿದಂತೆ ಅವರ ವಿರೋಧ ಒಂದು ನಿಟ್ಟಿನಲ್ಲಿ ಸಮರ್ಥನಿಯವು ಇರಬಹುದು. ಏಕೆಂದರೆ ನಾನು ಮೊದಲೇ ಹೇಳಿದಂತೆ ಮುಸಲ್ಮಾನರು ತೋರಿದ ವ್ಯವಹಾರವಾಗಿದೆ. ಅವರು ಮುಸಲ್ಮಾನರಲ್ಲಿ ಉಗ್ರವಾದವನ್ನು ಕಂಡರು. ಅವರು ಮುಸಲ್ಮಾನರು ಹೆಚ್ಚಿನ ದೇಶಗಳಲ್ಲಿ ಇತರರ ಹಕ್ಕುಗಳನ್ನು ಪಾಲಿಸದಿದ್ದುದ್ದು ಕಂಡರು. ಬಹುಶಃ ಇದೇ ಕಾರಣದಿಂದ ಅವರಿಗೆ ಭಯವಿತ್ತು. ಆದರೆ ಅವರು ತಮ್ಮ ಮಸೀದಿಯನ್ನು ನೋಡಿದಾಗ, ನಮ್ಮ ವ್ಯವಹಾರವನ್ನು ನೋಡಿದಾಗ, ನಿಜವಾದ ಇಸ್ಲಾಂ ಧರ್ಮದ ಶಿಕ್ಷಣವನ್ನು ನೋಡಿದಾಗ, ಅವರ ಅನುಮಾನಗಳು' ಎಲ್ಲಾ ಶಂಕೆಗಳು ದುರವಾಗುವುದು. ಸ್ವಯಂ ಇಲ್ಲಿನ ಜನರೇ ಅದಕ್ಕೆ ಸಾಕ್ಷಿ, ವಿರೋಧಿಸಿದ್ದವರು ಇಂದು ನಮ್ಮ ಮಿತ್ರರಾಗಿದ್ದಾರೆ, ಮತ್ತು ಅವರು ವಿರೋಧವನ್ನು ತ್ಯಜಿಸಿದ್ದಾರೆ. ನಿಧಾನವಾಗಿ ಇನ್ನೂ ವಿರೋಧ ಕಡಿಮೆಯಾಗುವುದು. ಇಸ್ಲಾಮಿನ ಬಗ್ಗೆ ಹೆಚ್ಚು ತಿಳುವಳಿಕೆ ಬಂದ ಹಾಗೆ ಮಿತ್ರತ್ವ ಇನ್ನೂ ಹೆಚ್ಚಾಗುವುದು.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಅದೇ ರೀತಿ ಸರಕಾರದ ಕಡೆಯಿಂದ ಅಲ್ಪಸಂಕ್ಯಾತರ ಪ್ರತಿನಿಧಿಗಳು ಸಹ ಬಂದಿದ್ದಾರೆ. ಅವರು ತುಂಬಾ ಒಳ್ಳೆಯ ಮತನ್ನು ಆಡಿದ್ದಾರೆ, ಧಾರ್ಮಿಕ ಸ್ವಾತಂತ್ರ್ಯವಿರಬೇಕು. ಜರ್ಮನಿಯ ಸಂವಿಧಾನ ಪರಿಪೂರ್ಣ ರೀತಿಯಲ್ಲಿ ಧಾರ್ಮಿಕ ಸ್ವಾತಂತ್ರ್ಯ ನೀಡುತ್ತದೆ. ನಾವು ಅದಕ್ಕಾಗಿ ಸರಕಾರಕ್ಕೆ ಕೃತಜ್ಞರಾಗಿದ್ದೇವೆ. ಏಕೆಂದರೆ ಈ ಧಾರ್ಮಿಕ ಸ್ವಾತಂತ್ರ್ಯ ಕಾರಣದಿಂದಲೇ ಹೆಚ್ಚಿನ ಪಾಕಿಸ್ತಾನಿಯರು ಇಲ್ಲಿ ಬಂದು ನೆಲೆಸಿದ್ದಾರೆ. ಅವರಿಗೆ ಅವರ ದೇಶದಲ್ಲಿ ಧಾರ್ಮಿಕ ಸ್ವಾತಂತ್ರ್ಯವಿರಲಿಲ್ಲ. ಇಲ್ಲಿ ಬಂದು ಸರಕಾರದ ಆಶ್ರಯದಲ್ಲಿ ಶಾಂತಿಯಿಂದ ಇರದ ಸೌಭಾಗ್ಯ ದೊರೆತಿದೆ. ಅವರು ಧಾರ್ಮಿಕ ಸ್ವಾತಂತ್ರ್ಯದ ಈ ಹಕ್ಕು ಏನು ಅಡೆತಡೆಯಿಲ್ಲದೆ ಸಾರ್ಥಕವಾಗಿ ಬಳಸುವರು. ಈ ಪೈಕಿ ಅಂತೂ ನಾವು ಸರಕಾರಕ್ಕೆ ಕೃತಜ್ಞರಾಗಿದ್ದೇವೆ. ಈ ಸರಕಾರ ಜನರ ಧಾರ್ಮಿಕ ಸ್ವಾತಂತ್ರ್ಯ ದಮನಿಸುವ ದೇಶಗಳಿಂದ ಬಂದವರನ್ನು ಅಥವಾ ಯಾವುದೇ ರೀತಿಯ ಸ್ವಾತಂತ್ರ್ಯಕ್ಕೆ ಅಡ್ಡಿಪಡಿಸುವ ದೇಶದಿಂದ ಬಂದವರನ್ನು ಸ್ವಾಗತಿಸಿದೆ ಮತ್ತು ಶಾಂತಿಯಿಂದಿರಲು ಅವಕಾಶ ನೀಡಿದೆ. ವಿವಿಧ ಧರ್ಮಗಳ ಜನರು ಇಲ್ಲಿ ಪ್ರೀತಿಯಿಂದ ವಾಸಿಸುತ್ತಾರೆ. ಇದು ತುಂಬಾ ಸಂತೋಷದ ಮಾತಾಗಿದೆ. ನಾನು ಪ್ರಾರಂಭದಲ್ಲಿ ಹೇಳಿದಂತೆ ಎಲ್ಲ ಧರ್ಮಗಳ ಸ್ಥಪಕರು ತನ್ನ ಸೃಷ್ಟಿಕರ್ತನನ್ನು ಆರಾಧಿಸಲು, ಪರಸ್ಪರ ಹಕ್ಕುಗಳನ್ನು ಪಾಲಿಸಲು ಮತ್ತು ಒಬ್ಬರು ಮತ್ತೊಬ್ಬರ ನಡುವೆ ಉತ್ತಮ ವ್ಯವಹಾರ ಮಾಡಲು ಶಿಕ್ಷಣ ನೀಡಿದೆ.

ಹುಝೂರೆ ಅನ್ವರ್(ಅಬಿಅ) ಹೇಳಿದರು. ಹಕ್ಕುಗಳನ್ನು ಪಾಲಿಸುವುದು ಇಸ್ಲಾಂ ಧರ್ಮದ ಮೂಲ ಆದೇಶವಾಗಿದೆ. ಇಸ್ಲಾಂ ಕೇವಲ ತಮ್ಮ ಹಕ್ಕುಗಳಿಗಾಗಿ ಹೋರಾಡಲು ಶಿಕ್ಷಣ ನೀಡುವುದಿಲ್ಲ, ಇಸ್ಲಾಂ ಇತರರ ಹಕ್ಕುಗಳನ್ನು ಪಾಲಿಸಲು ಆದೇಶ ನೀಡುತ್ತದೆ. ಇದರಿಂದ ಲೋಕದಲ್ಲಿ ಶಾಂತಿ ಸ್ಥಾಪನೆಯಾಗುವುದು ಮತ್ತು ಸಮಾಜದಲ್ಲಿ ಪ್ರೀತಿ, ಪ್ರೇಮ, ಸದ್ಭಾವನೆ ಉಂಟಾಗುವುದು. ಇಂದು ಸಮಾಜಕ್ಕೆ ಅದರ ಅವಶ್ಯಕತೆಯೇ ಇದೆ.

**(ಮುಂದುವರಿಯುವುದು)**

***ವಿಶೇಶ ಸೂಚನೆ***

"ಬದರ್" ವಾರಪತ್ರಿಕೆಯ ಚಂದಾದರರಲ್ಲಿ ತಮ್ಮ ಬಾಕಿ ಇರುವ ವಾರ್ಷಿಕ ಶುಲ್ಕವನ್ನು ಶೀಘ್ರವೇ ಪಾವತಿಸಲು ವಿನಂತಿ.
ಮೊಬೈಲ್ ಸಂಖ್ಯೆ: 9760468663 (ವ್ಯವಸ್ಥಾಪಕರು)

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**
**NATIONAL TOLL FREE : 1800-103-2131**
**ಸಮಯ: ಬೆಳಿಗ್ಗೆ 08:30 ಯಿಂದ ರಾತ್ರಿ 10:30ಯವರೆಗೆ**
**(ಶುಕ್ರವಾರ ರಜೆ)**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.